ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily
ಪ್ರತಿ ಸುದ್ದಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 ಸಂಪುಟ: 05 | Issue:18 ಸಂಚಿಕೆ: 18 | Date: 25-01-2026 Sunday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

# 5 ಬಾರಿ ಸಾವಿನ ಹತ್ತಿರ ಹೋಗಿದ್ದೇನೆ: ಹೆಚ್.ಡಿ. ಕುಮಾರಸ್ವಾಮಿ




ತುಮಕೂರು: ನಾನು ಐದು ಬಾರಿ ಸಾವಿನಹತ್ತಿರಕ್ಕೆಹೋಗಿಬಂದಿದ್ದೇನೆ. ದೇವರ ಆಶೀರ್ವಾದದಿಂದಲೇ ನಾನು ಇನ್ನೂ ಬದುಕಿದ್ದೇನೆ ಎಂದು ಭಾವಿಸಿದ್ದೇನೆ. ನಮಗೆ ಒಂದು ಅವಕಾಶ ಕೊಡಿ. 5 ವರ್ಷಗಳ ಉತ್ತಮ ಸರ್ಕಾರ ನೋಡುತ್ತೇವೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದ್ದಾರೆ.

ತುಮಕೂರು ಗ್ರಾಮಾಂತರ ವಿಧಾನಸಭೆ ಕ್ಷೇತ್ರದ ರಾಗಿಮುದ್ದೆನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣ ಮಾಡಲಾಗಿರುವ ಆದಿಶಕ್ತಿ ಶ್ರೀಮಾರಮ್ಮ ಅಮ್ಮನವರ ದೇವಾಲಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇದು ಜೆಡಿಎಸ್ ಬಿಜೆಪಿ ಸರ್ಕಾರ ಅಲ್ಲ, ಆರೂವರೆ ಕೋಟಿ ಕನ್ನಡಿಗರ ಸರ್ಕಾರ ತರುತ್ತೇವೆ. ಅದಕ್ಕೆ ಅವಕಾಶ ಕೊಡಿ ಎಂದರು.

ಎರಡುಬಾರಿ ನಾನು ಮುಖ್ಯಮಂತ್ರಿ ಆಗಿದ್ದೆ. ನಾನು ಜನತೆಗೆ ದ್ರೋಹ ಬಗೆಯದೇ ಕೆಲಸ ಮಾಡಿದ್ದೇನೆ. ನನ್ನ ಆತ್ಮಕ್ಕೆ ತೃಪ್ತಿಯಾಗುವ ರೀತಿಯಲ್ಲಿ ನಾನು ಜನರ ಸೇವೆ ಮಾಡಿದ್ದೇನೆ. ಬೇರೆಯವರ ಕುತಂತ್ರದಿಂದ ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಲು ಆಗಲಿಲ್ಲ. ನನ್ನ ತಪ್ಪಿನಿಂದ ಆಗಿದ್ದಲ್ಲ. ಅವಕಾಶ ಸಿಕ್ಕಿದಾಗ ಸಾಕಷ್ಟು ಕೆಲಸ ಮಾಡಿದ್ದೇನೆ. ಸಾಲ ಮನ್ನಾ ಎರಡು ಅವಧಿಗಳಲ್ಲಿಯೂ ಮಾಡಿದ್ದೇನೆ. ಕೇಂದ್ರ ಸಹಕಾರ ಕೊಡುವುದಿಲ್ಲ ಎನ್ನುವುದು ತಪ್ಪು, ನಮ್ಮ ನಡವಳಿಕೆ ಮೇಲೆ ಎಲ್ಲವೂ ನಿಂತಿರುತ್ತದೆ. ನಾನು ಎರಡು ಬಾರಿ ಸಾಲ ಮನ್ನಾ ಮಾಡಿದಾಗ ನಾನು ಕೇಂದ್ರದ ಕಡೆ ನೋಡಲಿಲ್ಲ. ರಾಜ್ಯದ ಖಜಾನೆಯಿಂದ ಹಣ ನೀಡಿ ಸಾಲ ಮನ್ನಾ ಮಾಡಿದೆ. ಇವರು ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ತೋರಿಸುತ್ತಾರೆ. ಇದು ಸರಿಯಲ್ಲ ಎಂದು ಅವರು ಹೇಳಿದರು.

ಎರಡು ಸಾವಿರಕ್ಕೆ ಮರುಳಾಗಬೇಡಿ. ಐದು ವರ್ಷ ಒಂದು ಅವಕಾಶ ಕೊಡಿ, ಈ ಗ್ಯಾರಂಟಿಗಳು ನಿಮ್ಮ ಬದುಕಿಗೆ ಶಾಶ್ವತ ಪರಿಹಾರ ಅಲ್ಲ. ಕಾಂಗ್ರೆಸ್ ಸರಕಾರದ ಮೋಸಕ್ಕೆ ಬಲಿಯಾಗಬೇಡಿ ಎಂದು ಹೆಚ್.ಡಿ. ಕುಮಾರಸ್ವಾಮಿ ಮಹಿಳೆಯರಲ್ಲಿ ಮನವಿ ಮಾಡಿದರು.

ನಿಮಗೆ ತಾತ್ಕಾಲಿಕ ಉಪಶಮನ ಅಷ್ಟೇ ಈ ಐದು ಗ್ಯಾರಂಟಿಗಳು. ಇವುಗಳಿಂದ ಏನು ಉಪಯೋಗ ಇಲ್ಲ. ಇದಕ್ಕಾಗಿ ವರ್ಷಕ್ಕೆ 50,000 ಕೋಟಿ ಹಣವನ್ನು ಸರ್ಕಾರ ಖರ್ಚು ಮಾಡುತ್ತಿದೆ. ನೀವು ಕಟ್ಟುವ ತೆರಿಗೆ ಹಣವನ್ನೇ ನಿಮಗೆ ನೀಡುತ್ತಿದೆ. ಇದಕ್ಕೆ ಪ್ರತಿಯಾಗಿ ವಾರ್ಷಿಕ 1ರಿಂದ 1.25 ಲಕ್ಷ ಕೋಟಿ ಸಾಲ ಮಾಡುತ್ತಿದೆ. ಈ ಸಾಲವನ್ನು ಗ್ಯಾರೆಂಟಿ ಕೊಟ್ಟವರು ತೀರಿಸಲ್ಲ. ನೀವೇ ತೀರಿಸಬೇಕು ಎಂದು ಕೇಂದ್ರ ಸಚಿವರು ಹೇಳಿದರು.

ಇಡೀ ರಾಜ್ಯದಲ್ಲಿ ಈ ಸರಕಾರ ಸರ್ಕಾರ ಮದ್ಯದ ಹೊಳೆ ಹರಿಸುತ್ತಿದೆ. ಹಳ್ಳಿ ಹಳ್ಳಿಯಲ್ಲಿ ಕಿರಾಣಿ ಅಂಗಡಿಗಳಲ್ಲಿ ಕೂಡ ಮದ್ಯ ದೊರೆಯುತ್ತಿದೆ. ಸಿ.ಎಲ್. 7 ಮದ್ಯ ಪರವಾನಗಿಯನ್ನು ದೊಡ್ಡ ಪ್ರಮಾಣದಲ್ಲಿ ನೀಡುತ್ತಿದ್ದಾರೆ. ಇಂಥ ಒಂದು ಲೈಸನ್ಸ್ ಕೊಡುವುದಕ್ಕೆ ಇತ್ತೀಚೆಗೆ ಅಬಕಾರಿ ಅಧಿಕಾರಿಗಳು 2.50 ಕೋಟಿ ಲಂಚ ಪಡೆಯುವಾಗ ಸಿಕ್ಕಿಬಿದ್ದಿದ್ದಾರೆ. ನಿಮ್ಮ ಗಂಡಂದಿರಿಗೆ ಚೆನ್ನಾಗಿ ಕುಡಿಸಿ ಅವರನ್ನು ಹಾಳು ಮಾಡಿ ನಿಮಗೆ 2000 ಗೃಹಲಕ್ಷ್ಮೀ ಹಣ ಕೊಟ್ಟರೆ ಉಪಯೋಗ ಏನು? ನಿಮ್ಮ ಹಣ ಕಿತ್ತುಕೊಂಡು ನಿಮಗೆ ಅದರಲ್ಲಿ ಅಲ್ಪ ಮೊತ್ತ ನೀಡುತ್ತಿದ್ದಾರೆ. ದಯವಿಟ್ಟು ಎರಡು ಸಾವಿರಕ್ಕೆ ಮರುಳಾಗಬೇಡಿ. ಐದು ವರ್ಷ ಒಂದು ಅವಕಾಶ ಕೊಡಿ ಎಂದು ಕುಮಾರಸ್ವಾಮಿ ಅವರು ಮನವಿ ಮಾಡಿದರು.

ತುಮಕೂರು ಗ್ರಾಮಾಂತರ ಕ್ಷೇತ್ರದ ಶಾಸಕ ಸುರೇಶ್ ಗೌಡ, ತುರುವೇಕೆರೆ ಶಾಸಕ ಎಂ.ಟಿ. ಕೃಷ್ಣಪ್ಪ, ಮಾಜಿ ಶಾಸಕರಾದ ನಿಂಗಪ್ಪ, ನಾಗಮಂಗಲದ ಮಾಜಿ ಶಾಸಕ ಸುರೇಶ್ ಗೌಡ, ಜೆಡಿಎಸ್ ನಾಯಕರಾದ ನಾಗರಾಜು, ಉಗ್ರೇಶ, ರವಿಕುಮಾರ್, ಜಗದೀಶ್, ಡಾ.ರವಿ ಮುಂತಾದವರು ಭಾಗವಹಿಸಿದ್ದರು.

## ಕೇಂದ್ರ ಮಂತ್ರಿಯನ್ನ ಟೀಕಿಸಿದ ಮಾಜಿ ಸಂಸದ
## ಸೋಮಣ್ಣ ಅಭಿಮಾನಿ ಬಳಗ ಖಂಡನೆ



ತುಮಕೂರು: ರಾಜ್ಯ ನೊಣಂಬ ವೀರಶೈವ ಸಮಾಜದ ಸರ್ವಸದಸ್ಯರ ಸಭೆಯಲ್ಲಿ ಮಾಜಿ ಸಂಸದ ಜಿ.ಎಸ್.ಬಸವರಾಜು ಅವರು ಕೇಂದ್ರ ಸಚಿವ ವಿ.ಸೋಮಣ್ಣ ಅವರ ವಿರುದ್ಧ ಹೇಳಿಕೆ ನೀಡಿರುವುದನ್ನು ರಾಜ್ಯ ವಿ.ಸೋಮಣ್ಣ ಅಭಿಮಾನಿ ಬಳಗದ ಅಧ್ಯಕ್ಷ ಹೆಚ್.ಡಿ.ರಾಮಲಿಂಗಯ್ಯ, ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹೇಶ್ ಖಂಡಿಸಿದ್ದಾರೆ.

ಶನಿವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ನಡೆದ ನೊಣಂಬ ವೀರಶೈವ ಸಮಾಜದ ಸಭೆಯಲ್ಲಿ ಜಿ.ಎಸ್.ಬಸವರಾಜು ಅವರು, ವಿ.ಸೋಮಣ್ಣ ಅವರು ಲೋಕಸಭಾ ಚುನಾವಣೆಯಲ್ಲಿ ಗೆಲ್ಲಲು ತಾವು ಶ್ರಮ ಹಾಕಿ ತಪ್ಪು ಮಾಡಿದೆ ಎಂದು ಹೇಳಿದ್ದಾರೆ ಎಂದು ಆರೋಪಿಸಿ ಅವರ ಹೇಳಿಕೆಯನ್ನು ಖಂಡಿಸಿದರು.

ಸಚಿವ ಸೋಮಣ್ಣ ಅವರು ವಿವಿಧ ಅಭಿವೃದ್ಧಿ ಕಾರ್ಯಗಳ ಮೂಲಕ ಕ್ಷೇತ್ರದ ಜನರ ಮನ್ನಣೆ ಪಡೆಯುತ್ತಿದ್ದಾರೆ. ಆದರೆ ಮಾಜಿ ಸಂಸದ ಜಿ.ಎಸ್.ಬಸವರಾಜು ಅವರು ಸೋಮಣ್ಣನವರನ್ನು ಅಪಮಾನಿಸುವ ಉದ್ದೇಶದಿಂದ ಅವರ ವಿರುದ್ಧ ಸಲ್ಲದ ಹೇಳಿಕೆ ನೀಡಿ ಟೀಕಿಸಿರುವುದು ಸರಿಯಲ್ಲ ಎಂದು ಹೇಳಿದರು

ತಮ್ಮ 50 ವರ್ಷಗಳ ರಾಜಕಾರಣದಲ್ಲಿ ಜಿ.ಎಸ್.ಬಸವರಾಜು ಅವರ ಕೊಡುಗೆಗಳೇನು? ಕಾಂಗ್ರೆಸ್‌ನಲ್ಲಿದ್ದ ಅವರು ಬಿಜೆಪಿಗೆ ಬಂದಮೇಲೂ ಕಾಂಗ್ರೆಸ್ ಧೋರಣೆ ಅನುಸರಿಸಿದರು. ಬಿಜೆಪಿಯಲ್ಲಿದ್ದ ಬಂಡಾಯದ ಲಾಭ ಪಡೆದು ಅಂದಿನ ಲೋಕಸಭಾ ಸದಸ್ಯರಾಗಿದ್ದ ಎಸ್.ಮಲ್ಲಿಕಾರ್ಜುನಯ್ಯ ಅವರು ಮತ್ತೆ ಸ್ಪರ್ಧೆ ಮಾಡದಂತೆ ಲಾಭಿ ಮಾಡಿದರು. ಬಿಜೆಪಿಯ ಸಂಸದರಾಗಿ ಕೆಜೆಪಿಗೆ ಬೆಂಬಲ ನೀಡಿರುವುದಲ್ಲದೆ ವಿಧಾನಸಭಾ, ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಹಾಗೂ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ನಿಷ್ಠಾವಂತ ಬಿಜೆಪಿ ಕಾರ್ಯಕರ್ತರಿಗೆ ಟಿಕೆಟ್ ತಪ್ಪಿಸಿ ಪಕ್ಷ ಸೋಲು ಕಾಣಲು ಕಾರಣರಾದರು ಎಂದು ಆರೋಪಿಸಿದರು.

ಸಚಿವ ವಿ.ಸೋಮಣ್ಣನವರು ಜಿಲ್ಲೆಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಇಂದೇಂದೂ ಆಗಿರದಂತಹ ಕಾರ್ಯಕ್ರಮಗಳು ಕ್ಷೇತ್ರದಲ್ಲಿ ಚಾಲನೆ ಕಂಡಿವೆ. ಸೋಮಣ್ಣನವರ ಜನಪ್ರಿಯತೆ ಹಾಗೂ ಕಾರ್ಯವೈಖರಿ ಸಹಿಸಲಾಗದೆ ಜಿ.ಎಸ್.ಬಸವರಾಜು ಅವರು ಸೋಮಣ್ಣ ಅವರ ವಿರುದ್ಧ ಟೀಕೆ ಮಾಡುವುದನ್ನು ನಿಲ್ಲಿಸಬೇಕು ಎಂದು ರಾಮಲಿಂಗಯ್ಯ, ಕೆ.ಪಿ.ಮಹೇಶ್ ಒತ್ತಾಯಿಸಿದರು.

# ಸರ್ಕಾರದ ಅಭಿವೃದ್ಧಿ ಕಾಮಗಾರಿಗಳಿಗೆ ಹಿನ್ನಡೆ ಇಓ,ಸಿಇಓ,ಪಿಡಿಓಗಳಿಗೆ ಡಿಸಿ ಕ್ಲಾಸ್




ಆಶ್ರಯ ಯೋಜನೆಯಡಿ ಹಕ್ಕು ಪತ್ರ, ನಿವೇಶನ ಹಂಚಿಕೆಯಲ್ಲಿ ಚಿನಾ ಹಳ್ಳಿ ಶೂನ್ಯ ಸಾಧನೆ.ಕುಡಿಯುವ ನೀರಿನ ಸಮಸ್ಯೆ ಆಗದಂತೆ ಕೂಡಲೇ ಕ್ರಮ ಕಂಟ್ರೋಲ್ ರೂಮ್ ಮೊಬೈಲ್ ನಂಬರ್ ಸಾರ್ವಜನಿಕರಿಗೆ ನೀಡಿ.ನಿಗದಿತ ಸಮಯಕ್ಕೆ ಗುರಿ ಸಾಧಿಸುವುದು ಎಲ್ಲಾ ಅಧಿಕಾರಿಗಳ ಆದ್ಯ ಕರ್ತವ್ಯ. ಈ ಸೂಚನೆಗೆ ಅನುಗುಣವಾಗಿ ಎಲ್ಲರೂ ಕಾರ್ಯನಿರ್ವಹಿಸಿ ಎಂದು ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗಂಭೀರವಾಗಿ ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ, ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಸರ್ಕಾರವು ಯೋಜನೆಗಳನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದು, ಅದರಂತೆ ನಾವೆಲ್ಲರೂ ಪೂರಕವಾಗಿ ಪ್ರಗತಿಯತ್ತ ಕಡ್ಡಾಯವಾಗಿ ಶ್ರಮವಹಿಸಬೇಕು ಎಂದು ಹೇಳಿದರು.

ಚಿಕ್ಕನಾಯಕನಹಳ್ಳಿ ನಗರಕ್ಕೆ ಭೇಟಿ ನೀಡುವ ಮೂಲಕ, ಸ್ವಚ್ಛತೆಗೆ ಹೆಚ್ಚು ಹೊತ್ತು ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಮೊದಲು ಅಮೃತ ಯೋಜನೆಯಡಿ ಚಿಕ್ಕನಾಯಕನಹಳ್ಳಿ ಕೆರೆ ಸಮಗ್ರ ಅಭಿವೃದ್ಧಿಗೆ ಆಯ್ಕೆಯಾದ ಕಾರಣ ಸ್ಥಳಕ್ಕೆ ಭೇಟಿ ನೀಡುವ ಮೂಲಕ, ಕಾಮಗಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಎಂದು ಸಂಬಂಧಿಸಿದ ಅಧಿಕಾರಿಗೆ ಸೂಚಿಸಿದರು.

ತದನಂತರ ನಗರದ ಮಹಾಲಕ್ಷ್ಮೀ ಬಡಾವಣೆ ಪಾರ್ಕ್, ವೆಂಕಣ್ಣನಕಟ್ಟೆ ಪಾರ್ಕ್,ಕೊಡಗಲ್ ರಸ್ತೆ ಪಾರ್ಕ್ , ಪ್ರಧಾನ್ ಮಂತ್ರಿ ಅವಾಜ್ ಯೋಜನೆಯಡಿ 410 ನಿವೇಶನದ ಸ್ಥಳಕ್ಕೆ ಭೇಟಿ ನೀಡಿದರು. ತದನಂತರ ಮುದ್ದೇನಹಳ್ಳಿ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ, ಆಶ್ರಯ ನಿವೇಶನ ಮಂಜೂರಾದ ಸ್ಥಳ ಪರಿಶೀಲಿಸುವ ಮೂಲಕ ಕಾಮಗಾರಿಗಳ ಸ್ಥಳದಲ್ಲಿ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದರು.

ಉಪಕಾರ್ಯದರ್ಶಿಗಳಾದ ಸಂಜೀವಪ್ಪ ರವರು ಮಾತನಾಡಿ, ಯಾವುದೇ ಯೋಜನೆಗಳಿಂದ ಫಲಾನುಭವಿಗಳಿಗೆ ಅನಾನುಕೂಲ ಉಂಟಾಗದಂತೆ ಸಮರ್ಪಕವಾಗಿ ಅನುಷ್ಠಾನ ಮಾಡಬೇಕು. ತಾಲ್ಲೂಕಿನ ಪ್ರಗತಿ ಯಾವುದರಲ್ಲೂ ಕಡಿಮೆಯಾಗದಂತೆ ಸಂಬಂಧಿಸಿದ ಅಧಿಕಾರಿಗಳು ಮುತುವರ್ಜಿ ವಹಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಸೂಚಿಸಿದರು.

ನರೇಗಾ ಯೋಜನೆ ಕುರಿತು ಮಾನವ ದಿನಗಳ ಸೃಜನೆ, ಇ–ಕೆವೈಸಿ ನೋಂದಣಿ ಪ್ರಗತಿ ಹೆಚ್ಚಿಸಬೇಕು. ನಿಗದಿತ ಸಮಯಕ್ಕೆ ಎಲ್ಲಾ ಯೋಜನೆಗಳ ಪ್ರಗತಿ ಸಾಧಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಕಮಿಷನರ್ ಆದ ಸಪ್ತಶ್ರೀ,ತಹಸಿಲ್ದಾರ್ ಮಮತ.ಎಂ. ಕಾರ್ಯನಿರ್ವಾಹಕ ಅಧಿಕಾರಿ ದೊಡ್ಡಸಿದ್ದಯ್ಯ , ಸಹಾಯಕ ನಿರ್ದೇಶಕ ಇಂದ್ರೇಶ್ ಅವರು, ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳು, ವ್ಯವಸ್ಥಾಪಕರಾದ ಬಸವರಾಜು ಅವರು (ತಾಪಂ), ತಾಲ್ಲೂಕು ಪಂಚಾಯತ್ ಸಿಬ್ಬಂದಿಗಳು, 27 ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು ಇತರರು ಹಾಜರಿದ್ದರು.

## ಕೊರಟಗೆರೆ ಬಸ್ ನಿಲ್ದಾಣದಲ್ಲಿ ಸರ್ಕಾರಿ ಯೋಜನೆಗಳ
## ಮಾಹಿತಿ ಮಳಿಗೆ ಉದ್ಘಾಟಿಸಿದ ಜಿಲ್ಲಾಧಿಕಾರಿ

ಅರ್ಹರಿಗೆ ಯೋಜನೆ ಫಲ ಸಿಗಬೇಕು: ಡಿಸಿ ಶುಭಕಲ್ಯಾಣ್




ತುಮಕೂರು: ರಾಜ್ಯ ಸರ್ಕಾರದಿಂದ ಹಲವಾರು ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಸಿಗುವಂತೆ ಮಾಡುವುದೇ ಈ ಪ್ರದರ್ಶನದ ಉದ್ದೇಶ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಹೇಳಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯೋಜಿಸಿರುವ ಪರಿಶಿಷ್ಟ ಜಾತಿ, ಪಂಗಡ ಸಮುದಾಯಗಳಿಗೆ ರಾಜ್ಯ ಸರ್ಕಾರ ಜಾರಿಗೆ ತಂದಿರುವ ವಿವಿಧ ಯೋಜನೆಗಳ ಮಾಹಿತಿ ಮಳಿಗೆಯನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಶಕ್ತಿ, ಗೃಹಲಕ್ಷ್ಮೀ, ಭಾಗ್ಯಜ್ಯೋತಿ, ಅನ್ನಭಾಗ್ಯ, ಯುವನಿಧಿ ಪಂಚ ಗ್ಯಾರಂಟಿ ಯೋಜನೆಗಳೂ ಸೇರಿದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಗ್ರಾಮೀಣ ಬಡವರಿಗೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು, ಈ ಯೋಜನೆಗಳನ್ನು ಅರ್ಹ ಫಲಾನುಭವಿಗೆ ತಲುಪಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ರಾಜ್ಯದ ಬಹುತೇಕ ಜನರು ಸರ್ಕಾರದ ಒಂದಿಲ್ಲೊಂದು ಯೋಜನೆಗಳ ಫಲಾನುಭವಿಯಾಗಿದ್ದಾರೆ ಎಂದ ಅವರು, ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಿಸುವ ಪ್ರಯತ್ನ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ವಾರ್ತಾ ಮತ್ತು ಸಾರ್ಜನಿಕ ಸಂಪರ್ಕ ಇಲಾಖೆ ಸರ್ಕಾರದ ಯೋಜನೆಗಳ ಮಾಹಿತಿ ಮಳಿಗೆ ಸ್ಥಾಪಿಸಿ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುತ್ತಿರುವುದು ಪ್ರಶಂಸನೀಯ ಎಂದರು.

ಈ ಸಂದರ್ಭದಲ್ಲಿ, ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷ ಗೋಪಿನಾಥ್, ಪಟ್ಟಣಪಂಚಾಯ್ತಿ ಸದಸ್ಯ ಓಬಳರಾಜ್, ಮಧುಗಿರಿ ಉಪವಿಭಾಗಾಧಿಕಾರಿ ಗೋಟೂರು ಶಿವಪ್ಪ, ಕೊರಟಗೆರೆ ತಹಸೀಲ್ದಾರ್ ಮಂಜುನಾಥ್ ಹಾಗೂ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಅಪೂರ್ವ ಮತ್ತಿತರರು ಉಪಸ್ಥಿತರಿದ್ದರು.

# ಆಗ್ನೇಯ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಶಶಿ ಹುಲಿಕುಂಟೆ ಮಠ್ ಪ್ರಚಾರ



ಆಗ್ನೇಯ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆ ಮಠ್, ಪತ್ನಿ ಅಮೂಲ್ಯ ಅವರ ಸಮೇತ ತುಮಕೂರಿನ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ ಮಠಾಧೀಶ ಸಿದ್ದಲಿಂಗ ಸ್ವಾಮೀಜಿಯವರ ಆಶೀರ್ವಾದ ಪಡೆದು ಪ್ರಚಾರ ಆರಂಭಿಸಿದರು. ಕೆಲಕಾಲ ಸಿದ್ದಗಂಗಾ ಸ್ವಾಮೀಜಿ ಅವರೊಂದಿಗೆ ಚರ್ಚಿದರು. ದೆಹಲಿಗೆ ಹೋಗಿ ಬಂದಿದ್ದೀರಾ ? ಪಕ್ಷದ ವರಿಷ್ಠರ ಸಲಹೆ ಏನೇನು ನೀಡಿದ್ದೀರೆ?, ತಿಪಟೂರು ಶಾಸಕ ಷಡಕ್ಷರಿ ಅವರನ್ನ ಭೇಟಿಯಾದ ವಿಚಾರ ತಿಳಿಯಿತು. ಪಕ್ಷದ ಆಜ್ಞೆ, ಆದೇಶದ ಪ್ರಕಾರ ನಡೆದುಕೊಳ್ಳಿ, ಚಿಕ್ಕ ವಯಸ್ಸಿನಲ್ಲಿ ದೊಡ್ಡ ಜವಾಬ್ದಾರಿ ದೊರೆಯುತ್ತಿದೆ. ರಾಜಕೀಯದಲ್ಲಿ ಉತ್ತಮ ಹುದ್ದೆಗಳು ಸಿದ್ದಿಯಾಗಲಿ ಎಂದು ಸಿದ್ದಲಿಂಗ ಸ್ವಾಮೀಜಿ ಅವರು ಶಶಿಹುಲಿ ಕುಂಟೆ ಮಠ್ ಅವರನ್ನ ಬೆನ್ನು ತಟ್ಟಿ ಹಾರೈಸಿದರು ಹಾಗೆಯೇ ಮಠದ ಆಶೀರ್ವಾದ ನಿಮ್ಮ ಮೇಲಿದೆ ಎಂದು ಹರಸಿದರು. ಈ ವೇಳೆ ಸಿದ್ದಲಿಂಗ ಸ್ವಾಮೀಜಿ ಅವರು ಶಶಿಹುಲಿ ಕುಂಟೆ ಮಠ್ ಅವರಿಗೆ ಶಾಲು ಹೊದಿಸಿ ಮಠದ ವತಿಯಿಂದ ಸನ್ಮಾನಿಸಿ ಗೌರವಿಸಿದರು. ಇದಕ್ಕೂ ಮುನ್ನ ಡಾ. ಶಿವಕುಮಾರಸ್ವಾಮೀಜಿ ಅವರ ಗದ್ದುಗೆಗೆ ತೆರಳಿ ತ್ರಿವಿಧ ದಾಸೋಹಿಗೆ ವಿಶೇಷ ಪೂಜೆ ಸಲ್ಲಿಸಿ ಚುನಾವಣೆಯಲ್ಲಿ ಗೆಲುವಿಗಾಗಿ ಶಶಿ ಹುಲಿಕುಂಟೆ ಮಠ್ ಪ್ರಾರ್ಥನೆ ಸಲ್ಲಿಸಿದರು.

ಇದೆ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಉಪಾಧ್ಯಕ್ಷರು ಆಗಿರುವ ಶಶಿ ಹುಲಿ ಕುಂಟೆ ಮಠ್ ಅವರಿಗೆ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಯುವ ಘಟಕದ ಜಿಲ್ಲಾಧ್ಯಕ್ಷ ಡಾ. ದರ್ಶನ್ ಕೆ. ಎಲ್ ಅವರು ಬೆಂಬಲ ವ್ಯಕ್ತಪಡಿಸಿದರು.ಸ್ವಾಮೀಜಿ ಭೇಟಿ ಬಳಿಕ ಶಶಿ ಹುಲಿಕುಂಟೆ ಮಠ್ ಮಾಧ್ಯಮದವರೊಂದಿಗೆ ಮಾತನಾಡಿ,ಟಿಕೇಟ್ ಘೋಷಣೆಯಾದ ಬಳಿಕ ಸಿದ್ದಗಂಗಾ ಮಠಕ್ಕೆ ಮೊದಲ ಬಾರಿಗೆ ಭೇಟಿ ನೀಡಿ ಶಿವಕುಮಾರಸ್ವಾಮೀಜಿ ಗದ್ದುಗೆ ಪೂಜೆ ಸಲ್ಲಿಸಿ, ಸಿದ್ದಗಂಗಾ ಸ್ವಾಮೀಜಿ ಆಶೀರ್ವಾದ ಪಡೆದಿದ್ದೇನೆ ಹಾಗೆಯೇ ಇಂದಿನಿಂದ ತುಮಕೂರು ಜಿಲ್ಲಾ ಪ್ರವಾಸ, ಜೊತೆಗೆ ಶಿಕ್ಷಕರು, ಸೇರಿದಂತೆ ನನಗೆ ಬೆನ್ನೆಲುಬಾಗಿ ನಿಂತಿರುವವರು ನನ್ನೊಂದಿಗೆ ಮಠಕ್ಕೆ ಬಂದಿದ್ದಾರೆ ಎಂದರು. ತಾಲೂಕು ಮಟ್ಟದಲ್ಲಿ, ವಿಧಾನಸಭಾ ಮಟ್ಟದಲ್ಲಿ ಶಾಸಕರ ನೇತೃತ್ವದಲ್ಲಿ ಚುನಾವಣೆ ಪೂರ್ವ ಭಾವಿ ಚಟುವಟಿಕೆ ನಡೆಯುತ್ತಿದೆ.ಇದಕ್ಕೆ ಶಿಕ್ಷಕರು, ಪಧವೀದರ ಬೆಂಬಲವಾಗಿದ್ದಾರೆ.5 ಜಿಲ್ಲೆಯಿಂದ 1 ಲಕ್ಷದ 76 ಸಾವಿರ ಮತದಾರ ಪದವೀಧರರ ನೋಂದಣಿಯಾಗಿದೆ ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 49 ಸಾವಿರಕ್ಕೂ ಅಧಿಕ ನೋಂದಣಿಯಾಗಿದೆ ಎಂದರು.

## ಇಂದು ಕ್ಯಾಮೇನಹಳ್ಳಿ ಆಂಜನೇಯ ಸ್ವಾಮಿಯ ಬ್ರಹ್ಮ ರಥೋತ್ಸವ



ಕೊರಟಗೆರೆ:ಇತಿಹಾಸ ಪ್ರಸಿದ್ಧ ದಕ್ಷಿಣ ಅಭಿಮುಖವಾಗಿ ಮಧ್ವಾಚಾರ್ಯರಿಂದ ಸ್ಥಾಪಿತಗೊಂಡ ಶ್ರೀ ಕ್ಯಾಮನಹಳ್ಳಿ ಆಂಜನೇಯ ಸ್ವಾಮಿಯ ಬ್ರಹ್ಮ ರಥೋತ್ಸವ ಇಂದು ವಿವಿಧ ಧಾರ್ಮಿಕ ಕೈಂಕರ್ಯಗಳ ಮೂಲಕ ನೆರವೇರುವುದು ಧಾರ್ಮಿಕ ವೃತ್ತಿ ಇಲಾಖೆ ಅಡಿ ನಡೆಯುವ ಈ ಬ್ರಹ್ಮ ರಥೋತ್ಸವವು ಸುಪ್ರಸಿದ್ಧವಾಗಿದ್ದು ಜಿಲ್ಲೆ ಸೇರಿದಂತೆ ವಿವಿಧ ಜಿಲ್ಲೆ ರಾಜ್ಯಗಳ ಭಕ್ತರು ಪಾಲ್ಗೊಳ್ಳುವರು. ಬ್ರಹ್ಮ ರಥೋತ್ಸವಕ್ಕೆ ಗೃಹ ಸಚಿವರದ ಡಾ. ಜಿ ಪರಮೇಶ್ವರ್, ಕೇಂದ್ರ ಮಂತ್ರಿ ವಿ ಸೋಮಣ್ಣ ಸೇರಿದಂತೆ ವಿವಿಧ ಗಣ್ಯ ಮಾನ್ಯರು ಚಾಲನೆ ನೀಡಲಿದ್ದಾರೆ ಕ್ಷೇತ್ರದಲ್ಲಿ ಅನೇಕ ಭಕ್ತರು ಅನ್ನದಾಸೋಹ ನಡೆಸುವರು.

### ರಥೋತ್ಸವದ ಪ್ರಯುಕ್ತ ಕುರುಕ್ಷೇತ್ರ ನಾಟಕ ಪ್ರದರ್ಶನ

ಕಮನಿಯ ಕ್ಷೇತ್ರದಲ್ಲಿ ನಡೆಯುವ ಬ್ರಹ್ಮ ರಥೋತ್ಸವದ ವೇಳೆ ಹತ್ತು ಹಲವು ವಿಶೇಷತೆಗಳು ಕಾಣ ಬರುತ್ತಿದ್ದು ರಥೋತ್ಸವದ ಪ್ರಯುಕ್ತ ಶ್ರೀ ಮಾರುತಿ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ಕುರುಕ್ಷೇತ್ರ ಎಂಬ ಪೌರಾಣಿಕ ನಾಟಕವನ್ನು ಪ್ರದರ್ಶನ ಗೊಳಿಸಲಿದ್ದು ತಾಲೂಕಿನ ವಿವಿಧ ನುರಿತ ಕಲಾವಿದರು ವಾದ್ಯ ವೃಂದದವರು ಈ ನಾಟಕದಲ್ಲಿ ಅಭಿನಯಿಸಲಿದ್ದಾರೆ.

## ಸಿದ್ಧಗಂಗಾ ಹಿಂದು ಸಮಾಜೋತ್ಸವ

ತುಮಕೂರು: ನಗರದ ಬಟವಾಡಿಯ ಅಶೋಕನಗರದಲ್ಲಿರುವ ಹಿಂದು ಸಮಾಜೋತ್ಸವದ ವತಿಯಿಂದ ಸಿದ್ಧಗಂಗಾ ಹಿಂದು ಸಮಾಜೋತ್ಸವ ಕಾರ್ಯಕ್ರಮವನ್ನು ಜ.26 ರ ಸೋಮವಾರ ಬಿರ್ಲಾ ಸಭಾಂಗಣ, ಎಸ್.ಐ.ಟಿ. ಇಲ್ಲಿ ಏರ್ಪಡಿಸಲಾಗಿದೆ. ಮಧ್ಯಾಹ್ನ 2.30ಕ್ಕೆ ಶೋಭಾಯಾತ್ರೆ, ಸಂಜೆ 4 ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಸಂಜೆ ನಡೆಯಲಿರುವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಕಿರಿಯ ಶ್ರೀಗಳಾದ ಶ್ರೀ ಶಿವಸಿದ್ದೇಶ್ವರಸ್ವಾಮಿಗಳು ವಹಿಸುವರು. ಅಧ್ಯಕ್ಷತೆಯನ್ನು ಕೈಗಾರಿಕೋದ್ಯಮಿ ಹೆಚ್.ಜಿ.ಚಂದ್ರಶೇಖರ್ ವಹಿಸುವರು. ಮುಖ್ಯ ಭಾಷಣಕಾರರಾಗಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಮುಖ್ಯ ಅತಿಥಿಗಳಾಗಿ ಸಮಾಜ ಸೇವಕರಾದ ಇಂದಿರಮ್ಮ ಸುಂದರರಾವ್ ಆಗಮಿಸುವರು.

ಬಟವಾಡಿಯ ಶ್ರೀ ಆಂಜನೇಯಸ್ವಾಮಿ ದೇವಾಲಯದಿಂದ ಶೋಭಾ ಯಾತ್ರೆ ಆರಂಭವಾಗಲಿದ್ದು, ಅಶೋಕ ನಗರ, ಎಸ್.ಐ.ಟಿ. ಬಡಾವಣೆ, ಕೃಷ್ಣಾನಗರ, ಗಂಗೋತ್ರಿನಗರ, ಬಟವಾಡಿ, ವಾಲ್ಮೀಕಿನಗರ, ಮಹಾಲಕ್ಷ್ಮಿನಗರ, ಪ್ರಶಾಂತನಗರ, ದೇವರಾಯಪಟ್ಟಣ, ಶಿವಗಂಗಾ ನಗರದ ಸಮಸ್ತ ನಾಗರಿಕರು ಸಿದ್ಧಗಂಗಾ ಹಿಂದು ಸಮಾಜೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ತುಮಕೂರು ಹಿಂದು ಸಮಾಜೋತ್ಸವ ಸಮಿತಿಯ ಗೌರವ ಅಧ್ಯಕ್ಷರು ಹಾಗೂ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಕರಪತ್ರ ನೀಡುವ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

# ಇ–ಖಾತಾ ಸ್ಥಗಿತದ ಸಮಸ್ಯೆ ನಿವಾರಣೆಗೆ ಲ್ಯಾಂಡ್ ಡೆವಲಪರ್ಸ್ ಅಸೋಸಿಯೇಷನ್ ಒತ್ತಾಯ



ತುಮಕೂರು: ಗ್ರಾಮ ಪಂಚಾಯಿತಿ, ಪುರಸಭೆ, ನಗರಸಭೆ, ಕಾರ್ಪೋರೇಷನ್ ವ್ಯಾಪ್ತಿಯ ಎಲ್ಲಾ ಇ–ಖಾತಾಗಳನ್ನು ಕಳೆದ 45 ದಿನಗಳಿಂದ ಸ್ಥಗಿತಗೊಳಿಸಿರುವುದು ಗಂಭೀರ ಸಮಸ್ಯೆಯಾಗಿದೆ. ಈ ಬಗ್ಗೆ ಸರ್ಕಾರ ಎಚ್ಚೆತ್ತುಕೊಂಡು ಸಮಸ್ಯೆ ಬಗೆಹರಿಸಬೇಕು ಎಂದು ಜಿಲ್ಲಾ ಲ್ಯಾಂಡ್ ಡೆವಲಪರ್ಸ್ ಅಸೋಸಿಯೇಷನ್ ಅಧ್ಯಕ್ಷರೂ ಆದ ಸ್ಫೂರ್ತಿ ಡೆವಲಪರ್ಸ್ ಮಾಲೀಕ ಎಸ್.ಪಿ.ಚಿದಾನಂದ್ ಒತ್ತಾಯಿಸಿದರು.

ಶನಿವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸ ಇ–ಪೌತಿ ಸಾಫ್ಟ್‌ವೇರ್ ಅಳವಡಿಕೆಯ ಕಾರಣದಿಂದ ಈ ಸ್ಥಗಿತ ಉಂಟಾಗಿದೆ. ಸರ್ಕಾರ ಯಾವುದೇ ಹೊಸದನ್ನು ಜಾರಿಗೆ ತರುವಾಗ ಪರ್ಯಾಯ ವ್ಯವಸ್ಥೆ ಮಾಡಬೇಕು ಅಥವಾ ಒಂದು ಹಳ್ಳಿ ಅಥವಾ ಪಟ್ಟಣವನ್ನು ಪೈಲೆಟ್ ಪ್ರಾಜೆಕ್ಟ್ ಆಗಿ ಮಾಡಿಕೊಂಡು ಹೊಸ ವ್ಯವಸ್ಥೆ ಅಲ್ಲಿ ಜಾರಿ ಮಾಡಿ, ಅದರ ಸಾಧಕಬಾಧಕಗಳನ್ನು ಪರಿಶೀಲಿಸಿದ ನಂತರ ರಾಜ್ಯಾದ್ಯಂತ ಜಾರಿ ಮಾಡಬೇಕು ಎಂದು ಹೇಳಿದರು.

ಇ–ಖಾತಾ ಸ್ಥಗಿತದಿಂದ ಬ್ಯಾಂಕುಗಳಿಂದ ಸಾಲಸೌಲಭ್ಯಗಳು ದೊರೆಯದೆ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿವೆ. ಸಿ.ಸಿ ಮತ್ತು ಒ.ಸಿ. ಪಡೆಯುವ ಪ್ರಕ್ರಿಯೆ ಸುಮಾರು ಎರಡು ವರ್ಷಗಳಿಂದ ವಿಳಂಬವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ ಎಸ್.ಪಿ.ಚಿದಾನಂದ್ ಅವರು, ಕಟ್ಟಡ ಪರವಾನಗಿಗಳು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಆಗದೆ ಇರುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ತಡೆ ಉಂಟಾಗಿದೆ. ಪೂರ್ಣಗೊಂಡಿರುವ ರೆಸಿಡೆನ್ಸಿಂಯಲ್ ಲೇಔಟ್, ಪ್ಲಾಟ್‌ಗಳಿಗೆ ಲೈಸೆನ್ಸ್ ನೀಡುವಲ್ಲಿ ಅಧಿಕಾರಿಗಳ ವಿಳಂಬ ವರ್ತನೆ ದೂರಿದರು.

ಆಂಧ್ರಪ್ರದೇಶ ರಾಜ್ಯಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ಅತಿಯಾದ ನಿಯಮಾವಳಿ ಮತ್ತು ಜಟಿಲ ಕಾನೂನು ಪ್ರಕ್ರಿಯೆಗಳಿವೆ. ಇದರಿಂದ ಹೂಡಿಕೆದಾರರು ಕರ್ನಾಟಕದಿಂದ ಹಿಂದೆ ಸರಿಯುವಂತಹ ಸ್ಥಿತಿ ನಿರ್ಮಾಣವಾಗಿದೆ. ಪೌತಿ ಖಾತೆ ವರ್ಗಾವಣೆ ಪ್ರಕ್ರಿಯೆ ತೀವ್ರವಾಗಿ ವಿಳಂಬವಾಗುತ್ತಿದೆ ಎಂದು ಎಸ್.ಪಿ.ಚಿದಾನಂದ ಆಪಾದಿಸಿದರು.

ಎಂಇಆರ್–19 ಅಡಿಯಲ್ಲಿ ಲೈಸೆನ್ಸ್ ನೀಡುವ ವಿಷಯದಲ್ಲಿ ಸ್ಪಷ್ಟ ಮಾರ್ಗಸೂಚಿಗಳ ಕೊರತೆ ಇದೆ. ಪಾರ್ಕ್, ಸಿಎ ಹಾಗೂ ರಸ್ತೆಗಳಿಗೆ ಸಂಬಂಧಿಸಿದ ಡೀಡ್ ನೀಡುವ ಪ್ರಕ್ರಿಯೆಯಲ್ಲಿನ ವಿಳಂಬವೂ ಅಭಿವೃದ್ಧಿಗೆ ಅಡ್ಡಿಯಾಗಿದೆ. ಸರ್ಕಾರ ಮತ್ತು ಸಂಬಂಧಿತ ಇಲಾಖೆಗಳು ಕೂಡಲೇ ಮಧ್ಯಪ್ರವೇಶಿಸಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಬೇಕು. ಇ–ಖಾತಾ ಸಾಫ್ಟ್‌ವೇರ್ ಅನ್ನು ತುರ್ತು ಪರಿಷ್ಕರಣೆ ಮಾಡಿ ಸರಿಹೋಗುವವರೆಗೂ ಹಿಂದಿನ ವ್ಯವಸ್ಥೆಯನ್ನು ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಲ್ಯಾಂಡ್ ಡೆವಲಪರ್ಸ್ ಅಸೋಸಿಯೇಷನ್ ಕಾರ್ಯದರ್ಶಿ ಟಿ.ಜೆ.ಸನತ್, ಮುಖಂಡರಾದ ಕೆ.ಜೆ.ಹನುಮಂತರಾಜು, ಗೋಪಿ, ಭಾರಧ್ವಾಜ್, ಜೆ.ಎಸ್.ಅನಿಲ್‌ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

# ಇಂದು ರಾಷ್ಟ್ರೀಯ ಮತದಾರರ ದಿನ: ದಿನಾಚರಣೆಯ ಮಹತ್ವ ಮತ್ತು ಇತಿಹಾಸ

ರಾಷ್ಟ್ರೀಯ ಮತದಾರರ ದಿನಾಚರಣೆಯು (ಜನವರಿ 25) ಪ್ರಜಾಪ್ರಭುತ್ವವನ್ನು ಬಲಪಡಿಸಲು, ನಾಗರಿಕರಲ್ಲಿ ಚುನಾವಣಾ ಜಾಗೃತಿ ಮೂಡಿಸಲು ಮತ್ತು ಹೊಸ ಮತದಾರರನ್ನು ಪ್ರೋತ್ಸಾಹಿಸಲು ಮಹತ್ವದ ದಿನವಾಗಿದೆ; ಇದು ಮತದಾನದ ಮಹತ್ವವನ್ನು ಒತ್ತಿ ಹೇಳುತ್ತದೆ, ಜನರನ್ನು ಮಾಹಿತಿ ಆಧಾರಿತವಾಗಿ ಭಾಗವಹಿಸಲು ಪ್ರೇರೇಪಿಸುತ್ತದೆ ಮತ್ತು ಎಲ್ಲರಿಗೂ ಮತದಾನದ ಹಕ್ಕನ್ನು ಸುಲಭಗೊಳಿಸುವ ಮೂಲಕ "ಒಳಗೊಂಡ ಚುನಾವಣೆಗಳ" ಗುರಿಯನ್ನು ಸಾಧಿಸುತ್ತದೆ.

### ರಾಷ್ಟ್ರೀಯ ಮತದಾರರ ದಿನಾಚರಣೆಯ ಮಹತ್ವ:

ಪ್ರಜಾಪ್ರಭುತ್ವ ಬಲಪಡಿಸುವಿಕೆ: ಪ್ರತಿಯೊಬ್ಬ ಮತದಾರರ ಪಾಲ್ಗೊಳ್ಳುವಿಕೆಯು ಪ್ರಜಾಪ್ರಭುತ್ವದ ಆಶಯಗಳನ್ನು ಸರಿಯಾಗಿ ಪ್ರತಿಬಿಂಬಿಸುತ್ತದೆ. ಮತದಾನವು ಪ್ರಜಾಪ್ರಭುತ್ವದ ಮೂಲಾಧಾರವಾಗಿದೆ.

** ಚುನಾವಣಾ ಜಾಗೃತಿ:** ಮತದಾರರಲ್ಲಿ ಚುನಾವಣಾ ಪ್ರಕ್ರಿಯೆಯ ಬಗ್ಗೆ ಮತ್ತು ತಮ್ಮ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಬಳಸಲಾಗುತ್ತದೆ.

ಹೊಸ ಮತದಾರರ ನೋಂದಣಿ: ಅರ್ಹ ಯುವ ಮತದಾರರನ್ನು ನೋಂದಾಯಿಸಲು ಮತ್ತು ಅವರಿಗೆ ಮತದಾರರ ಗುರುತಿನ ಚೀಟಿ (EPIC) ನೀಡಿ ಪ್ರೋತ್ಸಾಹಿಸಲು ಒಂದು ವಿಶೇಷ ದಿನವಾಗಿದೆ.

ಮಾಹಿತಿ ಆಧಾರಿತ ಮತದಾನ: ಮತದಾರರು ಸಂಕುಚಿತ ಮನೋಭಾವ ಮತ್ತು ಪ್ರಲೋಭನೆಗಳನ್ನು ಮೀರಿ ಮಾಹಿತಿ ಆಧಾರಿತವಾಗಿ ಮತ ಚಲಾಯಿಸುವಂತೆ ಉತ್ತೇಜಿಸುತ್ತದೆ.

ಅಂತರ್ಗತ ಚುನಾವಣೆಗಳು: ವಿಕಲಚೇತನರು, ಹಿರಿಯರು ಮತ್ತು ದೂರದ ಪ್ರದೇಶದವರಂತಹ ಎಲ್ಲ ಮತದಾರರನ್ನು ಒಳಗೊಳ್ಳಲು ಚುನಾವಣಾ ಆಯೋಗವು ವಿಶೇಷ ಕ್ರಮಗಳನ್ನು ಕೈಗೊಳ್ಳುತ್ತದೆ.

ಸಾರ್ವಜನಿಕರಿಗೆ ಅರಿವು: ಮತದಾನದ ಪ್ರತಿಜ್ಞೆ ಮತ್ತು "ಮತದಾರನಾಗಲು ಹೆಮ್ಮೆ, ಮತದಾನ ಮಾಡಲು ಸಿದ್ಧ" ಎಂಬಂತಹ ಘೋಷಣೆಗಳ ಮೂಲಕ ಮತದಾನದ ಜವಾಬ್ದಾರಿಯನ್ನು ನೆನಪಿಸುತ್ತದೆ.

### 2026 ರ ರಾಷ್ಟ್ರೀಯ ಮತದಾರರ ದಿನ ಯಾವಾಗ? ಮತ್ತು ಭಾಗವಹಿಸುವುದು ಹೇಗೆ?

ಮತದಾರರ ಜಾಗೃತಿಯನ್ನು ಉತ್ತೇಜಿಸಲು, ಚುನಾವಣೆಗಳಲ್ಲಿ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಮತ್ತು ಮತದಾನದ ಪ್ರಜಾಪ್ರಭುತ್ವದ ಹಕ್ಕನ್ನು ಆಚರಿಸಲು ಭಾರತದಲ್ಲಿ ಪ್ರತಿ ವರ್ಷ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಗುತ್ತದೆ. ಇದು ವಿಶೇಷವಾಗಿ ವಿದ್ಯಾರ್ಥಿಗಳು ಮತ್ತು ಮೊದಲ ಬಾರಿಗೆ ಮತದಾರರಲ್ಲಿ ಮಾಹಿತಿಯುಕ್ತ ಮತ್ತು ಜವಾಬ್ದಾರಿಯುತ ಚುನಾವಣಾ ಭಾಗವಹಿಸುವಿಕೆಯ ಮಹತ್ವವನ್ನು ಎತ್ತಿ ತೋರಿಸುತ್ತದೆ .

ಭಾರತ ಚುನಾವಣಾ ಆಯೋಗದ ಸಂಸ್ಥಾಪನಾ ದಿನವನ್ನು ಗುರುತಿಸುವ ಮತ್ತು ಮುಕ್ತ, ನ್ಯಾಯಯುತ ಮತ್ತು ಎಲ್ಲರನ್ನೂ ಒಳಗೊಂಡ ಚುನಾವಣೆಗಳಿಗೆ ಭಾರತದ ಬದ್ಧತೆಯನ್ನು ಬಲಪಡಿಸುವ ಸಲುವಾಗಿ, 2026 ರ ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಗುವುದು .

ಭಾರತದಲ್ಲಿ ರಾಷ್ಟ್ರೀಯ ಮತದಾರರ ದಿನವನ್ನು ಯಾವಾಗ ಆಚರಿಸಲಾಗುತ್ತದೆ?ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಗುತ್ತದೆ: ಜನವರಿ 25 ರಾಷ್ಟ್ರೀಯ ಮತದಾರರ ದಿನ

**2026 ದಿನಾಂಕ: ಭಾನುವಾರ, 25 ಜನವರಿ 2026**

ಭಾರತದ ಚುನಾವಣಾ ಆಯೋಗವು 1950 ರ ಜನವರಿ 25 ರಂದು ಸ್ಥಾಪನೆಯಾದ ಕಾರಣ ಈ ದಿನಾಂಕವನ್ನು ಆಯ್ಕೆ ಮಾಡಲಾಗಿದೆ .
ರಾಷ್ಟ್ರೀಯ ಮತದಾರರ ದಿನವು ಏನನ್ನು ಸೂಚಿಸುತ್ತದೆ?

### ರಾಷ್ಟ್ರೀಯ ಮತದಾರರ ದಿನದ ಚಿಹ್ನೆಗಳು:

ಭಾರತದ ಚುನಾವಣಾ ಆಯೋಗದ ಅಡಿಪಾಯ
ಪ್ರಜಾಪ್ರಭುತ್ವದ ಆಧಾರಸ್ತಂಭವಾಗಿ ಮತದಾನದ ಹಕ್ಕು
ಚುನಾವಣಾ ಜಾಗೃತಿ ಮತ್ತು ಭಾಗವಹಿಸುವಿಕೆಯ ಮಹತ್ವ
ಪ್ರಜಾಪ್ರಭುತ್ವ ಆಡಳಿತವನ್ನು ಬಲಪಡಿಸುವಲ್ಲಿ ನಾಗರಿಕರ ಪಾತ್ರ




ಸರಳವಾಗಿ ಹೇಳುವುದಾದರೆ, ರಾಷ್ಟ್ರೀಯ ಮತದಾರರ ದಿನವನ್ನು ಭಾರತದ ಮತದಾರರಿಗೆ ಸಮರ್ಪಿಸಲಾಗಿದೆ .

### ರಾಷ್ಟ್ರೀಯ ಮತದಾರರ ದಿನದ ಇತಿಹಾಸ

ರಾಷ್ಟ್ರೀಯ ಮತದಾರರ ದಿನವನ್ನು ಮೊದಲು ಆಚರಿಸಿದ್ದು: 2011 ರಲ್ಲಿ. ಭಾರತದಲ್ಲಿ ಮೊದಲು ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು: 25 ಜನವರಿ 2011

ಭಾರತ ಸರ್ಕಾರವು ಈ ಕೆಳಗಿನವುಗಳನ್ನು ಉದ್ದೇಶಿಸಿ ರಾಷ್ಟ್ರೀಯ ಮತದಾರರ ದಿನವನ್ನು ಪರಿಚಯಿಸಿತು:




ಯುವಜನರಲ್ಲಿ ಕಡಿಮೆ ಮತದಾರರ ನೋಂದಣಿ
ಮತದಾನದ ಹಕ್ಕುಗಳ ಬಗ್ಗೆ ಅರಿವಿನ ಕೊರತೆ
ಚುನಾವಣೆಗಳಲ್ಲಿ ಮಾಹಿತಿಯುಕ್ತ ಭಾಗವಹಿಸುವಿಕೆಯ ಅಗತ್ಯ
ಅಂದಿನಿಂದ, ಇದನ್ನು ದೇಶಾದ್ಯಂತ ವಾರ್ಷಿಕವಾಗಿ ಆಚರಿಸಲಾಗುತ್ತಿದೆ.

### ರಾಷ್ಟ್ರೀಯ ಮತದಾರರ ದಿನ 2026 ರ ಥೀಮ್

"ಮತದಾನಕ್ಕಿಂತ ಉತ್ತಮವಾದದ್ದು ಇನ್ನೊಂದಿಲ್ಲ, ನಾನು ಖಂಡಿತವಾಗಿಯೂ ಮತ ಚಲಾಯಿಸುತ್ತೇನೆ"

ಇದು 2026 ರ ರಾಷ್ಟ್ರೀಯ ಮತದಾರರ ದಿನದ ಅಧಿಕೃತ ಧ್ಯೇಯವಾಕ್ಯವಾಗಿದ್ದು , ಇದರ ಮೇಲೆ ಗಮನ ಹರಿಸುವುದನ್ನು ಮುಂದುವರಿಸುತ್ತದೆ: ಮತದಾನದಲ್ಲಿ ಹೆಮ್ಮೆ ಸಕ್ರಿಯ ಭಾಗವಹಿಸುವಿಕೆ ಜವಾಬ್ದಾರಿಯುತ ಪೌರತ್ವ ರಾಷ್ಟ್ರೀಯ ಮತದಾರರ ದಿನದ ಲೋಗೋ: ಅರ್ಥವನ್ನು ವಿವರಿಸಲಾಗಿದೆ.

ರಾಷ್ಟ್ರೀಯ ಮತದಾರರ ದಿನದ ಲೋಗೋ ಎಲ್ಲರನ್ನೂ ಒಳಗೊಳ್ಳುವಿಕೆ ಮತ್ತು ಪ್ರಜಾಪ್ರಭುತ್ವದ ಭಾಗವಹಿಸುವಿಕೆಯನ್ನು ಸಂಕೇತಿಸುತ್ತದೆ:

ಅಶೋಕ ಚಕ್ರ: ಭಾರತವನ್ನು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಪ್ರತಿನಿಧಿಸುತ್ತದೆ.
ಶಾಯಿ ಹಚ್ಚಿದ ಬೆರಳು: ಮತದಾರರ ಭಾಗವಹಿಸುವಿಕೆಯ ಸಂಕೇತ.
ಟಿಕ್ ಮಾರ್ಕ್: ತಿಳುವಳಿಕೆಯುಳ್ಳ ಮತ್ತು ಪ್ರಜ್ಞಾಪೂರ್ವಕ ನಿರ್ಧಾರ ತೆಗೆದುಕೊಳ್ಳುವುದು.
ಈ ಲೋಗೋ ಪ್ರತಿಯೊಂದು ಮತವೂ ಮುಖ್ಯ ಎಂಬ ಕಲ್ಪನೆಯನ್ನು ಬಲಪಡಿಸುತ್ತದೆ .

### ರಾಷ್ಟ್ರೀಯ ಮತದಾರರ ದಿನದ ಮಹತ್ವ

ರಾಷ್ಟ್ರೀಯ ಮತದಾರರ ದಿನದ ಮಹತ್ವವು ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ಅದರ ಪಾತ್ರದಲ್ಲಿದೆ.
ರಾಷ್ಟ್ರೀಯ ಮತದಾರರ ದಿನ ಏಕೆ ಮುಖ್ಯ:
ಹೊಸ ಮತದಾರರ ನೋಂದಣಿಯನ್ನು ಪ್ರೋತ್ಸಾಹಿಸುತ್ತದೆ
ನೈತಿಕ ಮತದಾನವನ್ನು ಉತ್ತೇಜಿಸುತ್ತದೆ
ಚುನಾವಣಾ ಪ್ರಕ್ರಿಯೆಯ ಬಗ್ಗೆ ನಾಗರಿಕರಿಗೆ ಶಿಕ್ಷಣ ನೀಡುತ್ತದೆ
ವಿದ್ಯಾರ್ಥಿಗಳು ಮತ್ತು ಯುವಕರಲ್ಲಿ ಜಾಗೃತಿ ಮೂಡಿಸುತ್ತದೆ
ಪ್ರಜಾಪ್ರಭುತ್ವ ಸಂಸ್ಥೆಗಳಲ್ಲಿ ನಂಬಿಕೆಯನ್ನು ಬಲಪಡಿಸುತ್ತದೆ
ವಿದ್ಯಾರ್ಥಿಗಳು ಮತ್ತು ಮೊದಲ ಬಾರಿಗೆ ಮತದಾರರಿಗೆ ಮಹತ್ವ
ವಿದ್ಯಾರ್ಥಿಗಳಿಗೆ, ರಾಷ್ಟ್ರೀಯ ಮತದಾರರ ದಿನ 2026 ವಿಶೇಷವಾಗಿ ಮುಖ್ಯವಾಗಿದೆ ಏಕೆಂದರೆ: ಅನೇಕ ವಿದ್ಯಾರ್ಥಿಗಳು ಮೊದಲ ಬಾರಿಗೆ ಮತದಾರರಾಗುತ್ತಾರೆ ಇದು ನಾಗರಿಕ ಜವಾಬ್ದಾರಿಯನ್ನು ಉತ್ತೇಜಿಸುತ್ತದೆ
ಇದು ಶಿಕ್ಷಣವನ್ನು ಪ್ರಜಾಸತ್ತಾತ್ಮಕ ಭಾಗವಹಿಸುವಿಕೆಯೊಂದಿಗೆ ಸಂಪರ್ಕಿಸುತ್ತದೆ.
ವಿದ್ಯಾರ್ಥಿಗಳನ್ನು ಈ ಕೆಳಗಿನವುಗಳಿಗೆ ಪ್ರೋತ್ಸಾಹಿಸಲಾಗುತ್ತದೆ:
18 ವರ್ಷ ತುಂಬಿದ ನಂತರ ಮತದಾರರಾಗಿ ನೋಂದಾಯಿಸಿಕೊಳ್ಳಿ
ಚುನಾವಣಾ ನಿಯಮಗಳನ್ನು ಅರ್ಥಮಾಡಿಕೊಳ್ಳಿ
ಪ್ರಭಾವದ ಆಧಾರದ ಮೇಲೆ ಅಲ್ಲ, ಮಾಹಿತಿಯ ಆಧಾರದ ಮೇಲೆ ಜವಾಬ್ದಾರಿಯುತವಾಗಿ ಮತ ಚಲಾಯಿಸಿ.
ರಾಷ್ಟ್ರೀಯ ಮತದಾರರ ದಿನದಂದು ಪದ್ಧತಿಗಳು, ಚಟುವಟಿಕೆಗಳು ಮತ್ತು ಆಚರಣೆಗಳು ಭಾರತದಾದ್ಯಂತ, ರಾಷ್ಟ್ರೀಯ ಮತದಾರರ ದಿನವನ್ನು ಹಲವಾರು ಚಟುವಟಿಕೆಗಳಿಂದ ಗುರುತಿಸಲಾಗಿದೆ:

### ಪ್ರಮುಖ ಚಟುವಟಿಕೆಗಳು: ಮತದಾರರ ಪ್ರತಿಜ್ಞಾ ವಿಧಿವಿಧಾನ

ಹೊಸ ಮತದಾರರಿಗೆ ಇಕಖಅ (ಮತದಾರರ ಗುರುತಿನ ಚೀಟಿ) ವಿತರಣೆ ಜಾಗೃತಿ ರ್ಯಾಲಿಗಳು ಮತ್ತು ಅಭಿಯಾನಗಳು
ಶಾಲೆಗಳಲ್ಲಿ ಚರ್ಚೆಗಳು, ರಸಪ್ರಶ್ನೆಗಳು ಮತ್ತು ಸ್ಪರ್ಧೆಗಳು
ಚಿತ್ರಕಲಾ, ಪ್ರಬಂಧ, ಭಾಷಣ, ಪೋಸ್ಟರ್ ರಚನೆ ಸ್ಪರ್ಧೆಗಳು

ಈ ಚಟುವಟಿಕೆಗಳು ಪ್ರಜಾಪ್ರಭುತ್ವವನ್ನು ಭಾಗವಹಿಸುವ ಮತ್ತು ಎಲ್ಲರನ್ನೂ ಒಳಗೊಳ್ಳುವಂತೆ ಮಾಡುತ್ತದೆ .
ರಾಷ್ಟ್ರೀಯ ಮತದಾರರ ದಿನದ ಪ್ರಶಸ್ತಿಗಳು (ಅಧಿಕೃತ)
2026 ರ ರಾಷ್ಟ್ರೀಯ ಮತದಾರರ ದಿನದಂದು:ಭಾರತದ ಚುನಾವಣಾ ಆಯೋಗವು ರಾಷ್ಟ್ರೀಯ ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತದೆ.
ಮತದಾರರ ಶಿಕ್ಷಣ ಅಭಿಯಾನಗಳಿಗೆ ಮಾಧ್ಯಮ ಸಂಸ್ಥೆಗಳು ಗುರುತಿಸಲ್ಪಟ್ಟಿವೆ.
**ಪ್ರಶಸ್ತಿ ವಿಭಾಗಗಳು:** ಮುದ್ರಣ ಮಾಧ್ಯಮ ದೂರದರ್ಶನ ರೇಡಿಯೋ ಆನ್‌ಲೈನ್ / ಸಾಮಾಜಿಕ ಮಾಧ್ಯಮ
2026 ರ ರಾಷ್ಟ್ರೀಯ ಮತದಾರರ ದಿನದಂದು ವಿದ್ಯಾರ್ಥಿಗಳು ಹೇಗೆ ಭಾಗವಹಿಸಬಹುದು
ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಬಹುದು:
ಮತದಾರರಾಗಿ ನೋಂದಾಯಿಸಿಕೊಳ್ಳುವುದು (ಅರ್ಹತೆ ಇದ್ದರೆ)
ರಾಷ್ಟ್ರೀಯ ಮತದಾರರ ದಿನದ ಪ್ರತಿಜ್ಞೆ ಸ್ವೀಕಾರ
ಚರ್ಚೆಗಳು ಮತ್ತು ರಸಪ್ರಶ್ನೆಗಳಲ್ಲಿ ಭಾಗವಹಿಸುವುದು
ಪ್ರಬಂಧಗಳನ್ನು ಬರೆಯುವುದು ಅಥವಾ ಭಾಷಣಗಳನ್ನು ನೀಡುವುದು
ಪೋಸ್ಟರ್‌ಗಳು, ರಂಗೋಲಿ ಮತ್ತು ಘೋಷಣೆಗಳನ್ನು ರಚಿಸುವುದು
ಸಾಮಾಜಿಕ ಮಾಧ್ಯಮಗಳಲ್ಲಿ ಮತದಾರರ ಜಾಗೃತಿ ಸಂದೇಶಗಳನ್ನು ಹಂಚಿಕೊಳ್ಳುವುದು
ರಾಷ್ಟ್ರೀಯ ಮತದಾರರ ದಿನದ ಪ್ರಬಂಧ (ವಿದ್ಯಾರ್ಥಿ ಸ್ನೇಹಿ) ಕನ್ನಡದಲ್ಲಿ ।ಮತದಾನವು ಹಕ್ಕು ಮತ್ತು ಜವಾಬ್ದಾರಿ ಎರಡೂ ಎಂಬುದನ್ನು ರಾಷ್ಟ್ರೀಯ ಮತದಾರರ ದಿನವು ನಮಗೆ ನೆನಪಿಸುತ್ತದೆ. ಜನವರಿ 25 ರಂದು ಆಚರಿಸಲಾಗುವ ಇದು ಪ್ರಜಾಪ್ರಭುತ್ವದ ಭಾಗವಹಿಸುವಿಕೆಯ ಬಗ್ಗೆ ಜಾಗೃತಿ ಮೂಡಿಸುತ್ತದೆ ಮತ್ತು ಯುವ ನಾಗರಿಕರು ಜವಾಬ್ದಾರಿಯುತವಾಗಿ ಮತ ಚಲಾಯಿಸುವಂತೆ ಪ್ರೋತ್ಸಾಹಿಸುತ್ತದೆ. ಈ ದಿನವನ್ನು ಆಚರಿಸುವ ಮೂಲಕ, ಭಾರತವು ತನ್ನ ಪ್ರಜಾಪ್ರಭುತ್ವದ ಅಡಿಪಾಯವನ್ನು ಬಲಪಡಿಸುತ್ತದೆ.
ರಾಷ್ಟ್ರೀಯ ಮತದಾರರ ದಿನದ ಭಾಷಣ (ಸಂಕ್ಷಿಪ್ತ)
"ನಾಗರಿಕರು ಜವಾಬ್ದಾರಿಯುತವಾಗಿ ಭಾಗವಹಿಸಿದಾಗ ಮಾತ್ರ ಪ್ರಜಾಪ್ರಭುತ್ವ ಉಳಿಯುತ್ತದೆ ಎಂಬುದನ್ನು ರಾಷ್ಟ್ರೀಯ ಮತದಾರರ ದಿನವು ನಮಗೆ ನೆನಪಿಸುತ್ತದೆ. ಅರಿವು ಮತ್ತು ಸಮಗ್ರತೆಯಿಂದ ಮತ ಚಲಾಯಿಸಲು ಪ್ರತಿಜ್ಞೆ ಮಾಡೋಣ."

### ರಾಷ್ಟ್ರೀಯ ಮತದಾರರ ದಿನದ ಘೋಷಣೆಗಳು

ಮತದಾನದಷ್ಟು ಬೇರೇನೂ ಇಲ್ಲ, ನಾನು ಖಚಿತವಾಗಿ ಮತ ಚಲಾಯಿಸುತ್ತೇನೆ.ನನ್ನ ಮತ, ನನ್ನ ಧ್ವನಿ ಮತದಾನದಿಂದ ಬಲಿಷ್ಠ ಪ್ರಜಾಪ್ರಭುತ್ವ ಆರಂಭ. ನೋಂದಾಯಿಸಿ, ಮತ ಚಲಾಯಿಸಿ, ಭಾಗವಹಿಸಿ ತ್ವರಿತ ಸಾರಾಂಶ ಮತ್ತು ಪ್ರಮುಖ ಅಂಶಗಳು ರಾಷ್ಟ್ರೀಯ ಮತದಾರರ ದಿನ 2026: ಜನವರಿ 25 ಥೀಮ್ 2026: ಮತದಾನದಂತೆಯೇ ಇಲ್ಲ, ನಾನು ಖಚಿತವಾಗಿ ಮತ ಚಲಾಯಿಸುತ್ತೇನೆ. ಮೊದಲು ಆಚರಿಸಿದ್ದು: 2011 ಉದ್ದೇಶ: ಮತದಾರರ ಜಾಗೃತಿ ಮತ್ತು ಭಾಗವಹಿಸುವಿಕೆ ಗಮನ ಗುಂಪು: ವಿದ್ಯಾರ್ಥಿಗಳು ಮತ್ತು ಮೊದಲ ಬಾರಿಗೆ ಮತದಾರರು,ತೀರ್ಮಾನ ನಾಗರಿಕರು ಜವಾಬ್ದಾರಿಯುತವಾಗಿ ಮತ ಚಲಾಯಿಸಿದಾಗ ಮತ್ತು ಮಾಹಿತಿಯುಕ್ತವಾಗಿದ್ದಾಗ ಪ್ರಜಾಪ್ರಭುತ್ವವು ಅಭಿವೃದ್ಧಿ ಹೊಂದುತ್ತದೆ ಎಂಬುದನ್ನು ರಾಷ್ಟ್ರೀಯ ಮತದಾರರ ದಿನವು ನೆನಪಿಸುತ್ತದೆ. 2026 ರ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸುವ ಮೂಲಕ , ವಿದ್ಯಾರ್ಥಿಗಳು ಮತ್ತು ಮತದಾರರು ಭಾರತದ ಪ್ರಜಾಪ್ರಭುತ್ವದ ಭವಿಷ್ಯಕ್ಕೆ ಸಕ್ರಿಯ ಕೊಡುಗೆದಾರರಾಗುತ್ತಾರೆ. ಪ್ರತಿಯೊಂದು ಮತವೂ ಮುಖ್ಯವಾಗಿದೆ – ಮತ್ತು ಪ್ರತಿಯೊಬ್ಬ ಮತದಾರರು ರಾಷ್ಟ್ರವನ್ನು ರೂಪಿಸುತ್ತಾರೆ.

ವರದಿ : ಎ.ಎಸ್.ಭಾನುಪ್ರಕಾಶ್,ವೈ.ಎನ್.ಹೊಸಕೋಟೆ
ಉಪ ಸಂಪಾದಕರು

# ರಾತ್ರಿಯಲ್ಲಿ ಯೂರಿಕ್ ಆಮ್ಲ ಹೆಚ್ಚಾದಾಗ, ದೇಹದಲ್ಲಿ ಕಾಣಿಸಿಕೊಳ್ಳುವ ರೋಗ ಲಕ್ಷಣಗಳಿವು!

ಯೂರಿಕ್ ಆಮ್ಲವು ನೈಸರ್ಗಿಕವಾಗಿ ಉತ್ಪತ್ತಿಯಾಗುವ ತ್ಯಾಜ್ಯ ಉತ್ಪನ್ನವಾಗಿರುವುದರಿಂದ ದೇಹದಲ್ಲಿ ಯಾವಾಗಲೂ ಸಣ್ಣ ಪ್ರಮಾಣದಲ್ಲಿ ಯೂರಿಕ್ ಆಮ್ಲ ಇರುತ್ತದೆ. ಆದರೆ ಅದರ ಪ್ರಮಾಣ ಹೆಚ್ಚಾಗಲು ಪ್ರಾರಂಭಿಸಿದಾಗ ಅದರಿಂದ ದೇಹದಲ್ಲಿ ಸಮಸ್ಯೆಗಳನ್ನು ಉಂಟು ಮಾಡುತ್ತದೆ.

ಇಂದಿನ ಕಾರ್ಯನಿರತ ಜೀವನದಲ್ಲಿ, ನಮ್ಮಲ್ಲಿ ಬಹುತೇಕ ಜನರು ಒಂದಲ್ಲ ಒಂದು ಕಾಯಿಲೆಯಿಂದ ಬಳಲುತ್ತಿದ್ದಾರೆ. ಕೆಟ್ಟ ಆಹಾರ ಪದ್ಧತಿ ಮತ್ತು ಅನಾರೋಗ್ಯಕರ ಜೀವನಶೈಲಿ ಇದಕ್ಕೆ ಕಾರಣ. ಪ್ರಮುಖವಾಗಿ ಇಂದಿನ ದಿನಗಳಲ್ಲಿ ಸಣ್ಣ ವಯಸ್ಸಿಗೆ ಬಿಪಿ–ಶುಗರ್ ಕಾಯಿಲೆಗಳು ಕಾಣಿಸಿಕೊಳ್ಳುವ ವುದರ ಜೊತೆಗೆ ನಮ್ಮಲ್ಲಿ ಹೆಚ್ಚಿನವರು ಯೂರಿಕ್ ಆಮ್ಲದ ಸಮಸ್ಯೆಯಿಂದಲೂ ಕೂಡ ಬಳಲುತ್ತಿದ್ದಾರೆ. ಅದರಲ್ಲೂ ದೇಹದಲ್ಲಿ ಯೂರಿಕ್ ಆಮ್ಲದ ಮಟ್ಟ ಹೆಚ್ಚಾದರೆ, ಕೀಲು ನೋವು, ಊತ ಹಾಗೂ ನಡೆಯುವಾಗಲೂ ಕೂಡ ಸಮಸ್ಯೆಯನ್ನು ಎದುರಿಸುತ್ತಾರೆ.

### ಹಾಗಾದ್ರೆ ಈ ಯೂರಿಕ್ ಆಮ್ಲ ಎಂದರೇನು?

ಪ್ಯೂರಿನ್ ಎಂಬುದು ಕೆಲವು ರೀತಿಯ ಆಹಾರ ಪದಾರ್ಥಗಳಲ್ಲಿ ಕಂಡುಬರುವ ರಾಸಾಯನಿಕ ಸಂಯುಕ್ತವಾಗಿದೆ. ನಮ್ಮ ದೇಹವು ಈ ಪ್ಯೂರಿನ್ ಅನ್ನು ಜೀರ್ಣಿಸಿಕೊಂಡಾಗ, ಯೂರಿಕ್ ಆಮ್ಲವು ರೂಪು ಗೊಳ್ಳುತ್ತದೆ.

ಸಾಮಾನ್ಯವಾಗಿ ಮೂತ್ರಪಿಂಡವು ಮೂತ್ರದ ಮೂಲಕ ಯೂರಿಕ್ ಆಮ್ಲವನ್ನು ಹೊರಹಾಕುತ್ತದೆ, ಆದರೆ ದೇಹದಲ್ಲಿ ಅದರ ಪ್ರಮಾಣವು ತುಂಬಾ ಹೆಚ್ಚಾದಾಗ, ಅದನ್ನು ಹೊರಹಾಕಲು ಸಾಧ್ಯವಿಲ್ಲ. ಇದು ಹೆಚ್ಚಿನ ಯೂರಿಕ್ ಆಮ್ಲದ ಸಮಸ್ಯೆಗೆ ಕಾರಣ ವಾಗುತ್ತದೆ.

ಒಂದು ವೇಳೆ ದೇಹದಲ್ಲಿ ಯೂರಿಕ್ ಆಮ್ಲದ ಪ್ರಮಾಣ ಹೆಚ್ಚಾಗಿ ಬಿಟ್ಟರೆ, ಕೆಲವು ನಿರ್ದಿಷ್ಟ ಲಕ್ಷಣಗಳು ರಾತ್ರಿಯಲ್ಲಿ ಅಥವಾ ಬೆಳಗ್ಗೆ ಎದ್ದಾಗ ಹೆಚ್ಚು ತೊಂದರೆ ನೀಡುತ್ತವೆ. ರಾತ್ರಿಯಲ್ಲಿ ಕಂಡುಬರುವ ಅದರ ಲಕ್ಷಣಗಳನ್ನು (ಹೈ ಯೂರಿಕ್ ಆಮ್ಲ ಲಕ್ಷಣಗಳು ರಾತ್ರಿ ಯಲ್ಲಿ) ನಿರ್ಲಕ್ಷಿಸಬಾರದು. ಯೂರಿಕ್ ಆಮ್ಲ ಹೆಚ್ಚಾದಾಗ ರಾತ್ರಿಯಲ್ಲಿ ಯಾವ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಎಂಬುದನ್ನು ಇಂದಿನ ಲೇಖನದಲ್ಲಿ ನೋಡುತ್ತಾ ಹೋಗೋಣ

### ರಾತ್ರಿಯಲ್ಲಿ ತೀವ್ರ ಕೀಲು ನೋವು

ದೇಹದಲ್ಲಿ ಯೂರಿಕ್ ಆಮ್ಲದ ಹೆಚ್ಚಾಗಿರುವ ಸಾಮಾನ್ಯ ಲಕ್ಷಣ ವಾಗಿದೆ, ಇದು ಹೆಚ್ಚಾಗಿ ರಾತ್ರಿಯಲ್ಲಿ ಹದಗೆಡುತ್ತದೆ. ಯೂರಿಕ್ ಆಮ್ಲದ ಮಟ್ಟ ಹೆಚ್ಚಾದಾಗ, ಅದು ದೇಹದ ಕೀಲುಗಳಲ್ಲಿ ಹರಳುಗಳ ರೂಪದಲ್ಲಿ ಸಂಗ್ರಹವಾಗುತ್ತದೆ.

ಉದಾಹರಣೆಗೆ ಕಾಲ್ಬೆರಳುಗಳು (ಹಿಮ್ಮಡಿಗಳು, ಕಣಕಾಲುಗಳು, ಮೊಣಕಾಲುಗಳು). ಇದು ಕೀಲುಗಳಲ್ಲಿ ಹಠಾತ್ ತೀಕ್ಷ್ಣ ವಾದ, ಇರಿತದ ನೋವನ್ನು ಉಂಟುಮಾಡುತ್ತದೆ. ಈ ನೋವು ಎಷ್ಟು ತೀವ್ರವಾಗಿರುತ್ತದೆಯೆಂದರೆ ಅದು ನಿಮ್ಮ ನಿದ್ರೆಯನ್ನು ಹಾಳು ಮಾಡುತ್ತದೆ ಮತ್ತು ಬೆಡ್‌ಶೀಟ್‌ನ ಸಣ್ಣ ಸ್ಪರ್ಶ ಕೂಡ ಅಸಹನೀ ಯವೆನಿಸಬಹುದು.

### ಪದೇ ಪದೇ ಮೂತ್ರ ವಿಸರ್ಜನೆ

ಹೆಚ್ಚಿನ ಯೂರಿಕ್ ಆಮ್ಲವು ಮೂತ್ರಪಿಂಡಗಳಿಗೆ ನೇರವಾಗಿ ಸಂಬಂಧಿಸಿದೆ. ಯೂರಿಕ್ ಆಮ್ಲದ ಮಟ್ಟವು ತುಂಬಾ ಹೆಚ್ಚಾದಾಗ, ಮೂತ್ರಪಿಂಡಗಳ ಮೇಲೆ ಹೆಚ್ಚುವರಿ ಒತ್ತಡ ಉಂಟಾಗುತ್ತದೆ. ಅದು ಅದನ್ನು ಫಿಲ್ಟರ್ ಮಾಡಿ ದೇಹದಿಂದ ತೆಗೆದುಹಾಕಲು ಪ್ರಯತ್ನಿಸು ತ್ತಲೇ ಇರುತ್ತದೆ.

ಈ ಕಾರಣದಿಂದಾಗಿ, ರಾತ್ರಿಯಲ್ಲಿ ಪದೇ ಪದೇ ಮೂತ್ರ ವಿಸರ್ಜಿಸಲು ಅವಸರವಾಗುತ್ತದೆ ಅಲ್ಲದೆ ಈ ಸಮಯದಲ್ಲಿ ಮೂತ್ರದ ಪ್ರಮಾಣ ಕಡಿಮೆಯಾಗಿರಬಹುದು, ಆದರೆ ಮೂತ್ರಕೋಶವು ಸಂಪೂರ್ಣ ವಾಗಿ ಖಾಲಿಯಾಗಿಲ್ಲ ಎಂಬ ಭಾವನೆ ಇರುತ್ತದೆ.

ನಿಮಗೆ ಗೊತ್ತಿರಲಿ ಯೂರಿಕ್ ಆಮ್ಲದ ಮಟ್ಟ ಹೆಚ್ಚಾದಾಗ, ಮೂತ್ರ ಪಿಂಡಗಳು ಅದನ್ನು ಸಂಪೂರ್ಣವಾಗಿ ಫಿಲ್ಟರ್ ಮಾಡಲು ಸಾಧ್ಯ ವಾಗುವುದಿಲ್ಲ, ಇದರಿಂದಾಗಿ ಅದು ಮೂತ್ರನಾಳದಲ್ಲಿ ಹರಳುಗಳ ರೂಪದಲ್ಲಿ ಸಂಗ್ರಹವಾಗಬಹುದು.

ಇದು ನೋವು, ಸುಡುವ ಸಂವೇದನೆ ಅಥವಾ




ಮೂತ್ರ ವಿಸರ್ಜನೆಯ ಸಮಯದಲ್ಲಿ ಆಗಾಗ್ಗೆ ಮೂತ್ರ ವಿಸರ್ಜನೆಗೆ ಕಾರಣವಾಗಬಹುದು. ಕೆಲವೊಮ್ಮೆ ಹೆಚ್ಚಿದ ಯೂರಿಕ್ ಆಮ್ಲವು ಮೂತ್ರಪಿಂಡದ ಕಲ್ಲು ಗಳಿಗೆ ಕಾರಣವಾಗಬಹುದು, ಇದು ತೀವ್ರ ನೋವನ್ನು ಉಂಟು ಮಾಡುತ್ತದೆ.

### ರಾತ್ರಿಯಲ್ಲಿ ಬೆವರುವುದು ಮತ್ತು ಚಡಪಡಿಕೆ

ದೇಹದಲ್ಲಿ ಉರಿಯೂತ ಮತ್ತು ನಿರಂತರ ನೋವು ದೇಹದ ನರಮಂಡಲದ ಮೇಲೆ ಪರಿಣಾಮ ಬೀರುತ್ತದೆ. ಈ ಕಾರಣದಿಂದಾಗಿ, ಅನೇಕ ಜನರು ರಾತ್ರಿಯಲ್ಲಿ ಅತಿಯಾಗಿ ಬೆವರು ಮಾಡಬಹುದು ಅಥವಾ ಯಾವುದೇ ನಿರ್ದಿಷ್ಟ ಕಾರಣವಿಲ್ಲದೆ ಚಡಪಡಿಕೆ ಮತ್ತು ಅನಾನುಕೂಲತೆಯನ್ನು ಅನುಭವಿಸಬಹುದು.

### ಚರ್ಮದ ದದ್ದುಗಳು ಅಥವಾ ತುರಿಕೆ

ಕೆಲವು ಸಂದರ್ಭಗಳಲ್ಲಿ, ದೇಹದಲ್ಲಿ ಯೂರಿಕ್ ಆಮ್ಲದ ಮಟ್ಟ ಹೆಚ್ಚಾಗಿ ಬಿಟ್ಟರೆ ಚರ್ಮದಲ್ಲಿ ದದ್ದುಗಳು ಅಥವಾ ತುರಿಕೆಗೆ ಕಾರಣವಾಗ ಬಹುದು. ಯೂರಿಕ್ ಆಮ್ಲದ ಹರಳುಗಳು ಚರ್ಮದ ಅಡಿಯಲ್ಲಿ ಸಂಗ್ರಹವಾದಾಗ ಈ ಸಮಸ್ಯೆ ಉಂಟಾಗುತ್ತದೆ. ಇದು ಸಾಮಾನ್ಯವಾಗಿ ಬೆರಳುಗಳು, ಕಿವಿಗಳು ಅಥವಾ ಮೊಣಕೈಗಳ ಸುತ್ತಲೂ ಕಾಣಿಸಿಕೊಳ್ಳುತ್ತದೆ.

### ಹಾಗಾದ್ರೆ ಇದಕ್ಕೆ ಪರಿಹಾರಗಳೇನು?

ಸರಿಯಾಗಿ ನೀರು ಕುಡಿಯಿರಿ: ಮೊದಲ ಮತ್ತು ಸುಲಭವಾದ ಮಾರ್ಗ ವೆಂದರೆ ಸಾಕಷ್ಟು ನೀರು ಕುಡಿಯುವುದು. ಮೂತ್ರಪಿಂಡಗಳು ದೇಹದಿಂದ ವಿಷ ಮತ್ತು ಹೆಚ್ಚುವರಿ ಯೂರಿಕ್ ಆಮ್ಲವನ್ನು ತೆಗೆದು ಹಾಕಲು ನೀರು ಸಹಾಯ ಮಾಡುತ್ತದೆ. ನೀವು ಸಾಕಷ್ಟು ನೀರು ಕುಡಿದಾಗ, ಮೂತ್ರ ಪಿಂಡಗಳು ಯೂರಿಕ್ ಆಮ್ಲವನ್ನು ಸುಲಭವಾಗಿ ಫಿಲ್ಟರ್ ಮಾಡಿ ಮೂತ್ರದ ಮೂಲಕ ದೇಹದಿಂದ ಹೊರಹಾಕುತ್ತವೆ.

### ಆಹಾರಪದ್ಧತಿ ಹೀಗಿರಲಿ

ಪ್ಯೂರಿನ್ ಭರಿತ ಆಹಾರಗಳನ್ನು ಕಡಿಮೆ ಸೇವಿಸಿ: ಕೆಂಪು ಮಾಂಸ, ಸಮುದ್ರಾಹಾರ, ಆರ್ಗನ್ ಮಾಂಸ ಮತ್ತು ಕೆಲವು ರೀತಿಯ ದ್ವಿದಳ ಧಾನ್ಯಗಳನ್ನು ಸೀಮಿತ ಪ್ರಮಾಣದಲ್ಲಿ ಸೇವಿಸಿ.

### ಹಣ್ಣುಗಳು ಮತ್ತು ತರಕಾರಿಗಳನ್ನು ಹೆಚ್ಚಿಸಿ:

ಚೆರ್ರಿಗಳು, ಹಣ್ಣು ಗಳು, ಸೇಬುಗಳು, ಬಾಳೆಹಣ್ಣುಗಳು ಮತ್ತು ಸಿಟ್ರಸ್ ಹಣ್ಣುಗಳು ಯೂರಿಕ್ ಆಮ್ಲವನ್ನು ಕಡಿಮೆ ಮಾಡಲು ಸಹಾಯಕವಾಗಿವೆ. ಪಾಲಕ್, ಬ್ರೊಕೊಲಿ ಮತ್ತು ಬೆಲ್ ಪೆಪ್ಪರ್‌ಗಳಂತಹ ತರಕಾರಿಗಳು ಸಹ ಪ್ರಯೋಜನಕಾರಿ.

**ವಿಟಮಿನ್ ಸಿ ಪ್ರಮಾಣವನ್ನು ಹೆಚ್ಚಿಸಿ:**
ವಿಟಮಿನ್ ಸಿ ಮೂತ್ರ ಪಿಂಡಗಳ ಮೂಲಕ ಯೂರಿಕ್ ಆಮ್ಲವನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ನಿಮ್ಮ ಆಹಾರದಲ್ಲಿ ಕಿತ್ತಳೆ, ಕಿವಿ, ಆಮ್ಲಾ ಮತ್ತು ಸೀಬೆಹಣ್ಣನ್ನು ಸೇರಿಸಿ

### ಆಲ್ಕೋಹಾಲ್ ಮತ್ತು ಸಿಹಿ ಪಾನೀಯಗಳಿಂದ ದೂರವಿರಿ

ಮದ್ಯ ಮತ್ತು ಹೆಚ್ಚಿನ ಫ್ರಕ್ಟೋಸ್ ಕಾರ್ನ್ ಸಿರಪ್ ಹೊಂದಿರುವ ಪಾನೀಯಗಳು, ಉದಾಹರಣೆಗೆ ತಂಪು ಪಾನೀಯಗಳು ಮತ್ತು ಪ್ಯಾಕ್ ಮಾಡಿದ ಜ್ಯೂಸ್‌ಗಳು, ದೇಹದಲ್ಲಿ ಯೂರಿಕ್ ಆಮ್ಲದ ಉತ್ಪಾದನೆ ಯನ್ನು ಹೆಚ್ಚಿಸುತ್ತವೆ ಮತ್ತು ಅದನ್ನು ಹೊರಹಾಕುವ ಪ್ರಕ್ರಿಯೆ ಯನ್ನು ತಡೆಯುತ್ತವೆ.

ಆದ್ದರಿಂದ, ಬಿಯರ್ ಮತ್ತು ಇತರ ಆಲ್ಕೊಹಾಲ್ಯುಕ್ತ ಪಾನೀಯ ಗಳನ್ನು ಕಡಿಮೆ ಮಾಡಿ ಅಥವಾ ನಿಲ್ಲಿಸಿ. ತ'ಂಪು ಪಾನೀಯಗಳು ಮತ್ತು ಪ್ಯಾಕ್ ಮಾಡಿದ ಜ್ಯೂಸ್‌ಗಳ ಬದಲಿಗೆ, ತಾಜಾ ಹಣ್ಣಿನ ರಸ, ಮಜ್ಜಿಗೆ ಅಥವಾ ನಿಂಬೆ ಪಾನಕವನ್ನು ಕುಡಿಯಿರಿ.

### ವ ್ಯಾಯಾಮ ಮಾಡಿ ಮತ್ತು ದೇಹದ ತೂಕವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಿ

ಬೊಜ್ಜು ಯೂರಿಕ್ ಆಮ್ಲದ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ. ಅಧಿಕ ತೂಕವು ದೇಹದಲ್ಲಿ ಇನ್ಸುಲಿನ್ ಪ್ರತಿರೋಧವನ್ನು ಹೆಚ್ಚಿಸುತ್ತದೆ, ಇದು ಯೂರಿಕ್ ಆ ಮ್ಲದ ವಿಸರ್ಜನೆಗೆ ಅಡ್ಡಿಯಾಗುತ್ತದೆ. ಅಲ್ಲದೆ, ನಿಯಮಿತ ವ್ಯಾಯಾಮವು ದೇಹದ ಚಯಾಪಚಯ ಕ್ರಿಯೆಯನ್ನು ಆರೋಗ್ಯಕರವಾಗಿ ರಿಸುತ್ತದೆ.ಆದ್ದರಿಂದ, ನಿ ಮ್ಮ ತೂಕವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿ. ಚುರುಕಾದ ನಡಿಗೆ, ಈಜು, ಸೈಕ್ಲಿಂಗ್ ಮತ್ತು ಂ ಯೋಗದಂತಹ ವ್ಯಾಯಾಮ ಗಳನ್ನು ಮಾಡಿ. ಒಮ್ಮೆಲೇ ಭಾರೀ ವ್ಯಾಯಾಮಗಳನ್ನು ಮಾಡಬೇಡಿ ಎಂಬುದನ್ನು ನೆನಪಿನಲ್ಲಿಡಿ

# ಭವಿಷ್ಯ ಭಾರತವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಸತ್ಸಂಪ್ರದಾಯಗಳು ಸಾಕಷ್ಟು ಜರುಗಬೇಕಿದೆ



ಶಿರಾ : ಹಿಂದೂ ಧರ್ಮದ ಬಗ್ಗೆ ತಾತ್ಸಾರ ಬೇಡ. ಹಿಂದೂ ಧರ್ಮವನ್ನು ಬೆಳೆಸಿ ಉಳಿಸಿ ಬಳಸಿ, ತಂದೆ ತಾಯಂದಿರುವ ಮಕ್ಕಳಿಗೆ ಶಿಕ್ಷಣದ ಜೊತೆ ನಮ್ಮ ದೇಶದ ಸಂಸ್ಕೃತಿ, ಪರಂಪರೆ, ಸಂಪ್ರದಾಯದ ಬಗ್ಗೆ ಆಳವಾಗಿ ತಿಳಿಸಿ ಎಂದು ಶಿರಾದಲ್ಲಿ ಉದ್ಘಾಟನೆಗೊಂಡ ನೂತನ ಶ್ರೀ ಭವಾನೇಶ್ವರಿ (ಅಂಭಾಭವಾನಿ) ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ರಾಜ್ಯ ಖಾತೆ ಸಚಿವರಾದ ವಿ. ಸೋಮಣ್ಣ.

ಈ ಸ್ಥಳಕ್ಕೆ ಭೇಟಿಕೊಟ್ಟ ಮೇಲೆ ನನಗೆ ತಿಳಿದಿದ್ದು ತಾಯಿ ಅಂಬಾಭವಾನಿ ಅಮ್ಮನವರ ಪುರಾತನ ದೇವಾಲಯಕ್ಕೆ ಶಿರಾದಲ್ಲಿ ಐತಿಹಾಸಿಕ ಇತಿಹಾಸವಿದೆ ಎಂದು, ಮನುಷ್ಯಿಗೆ ವಿಧಿ ವಿಧಾನ ಜೊತೆಗೆ ಗುಡಿಗೋಪುರ ಕಟ್ಟುವುದು ಸುಲಭದ ಕೆಲಸವಲ್ಲ ಜಗನ್ಮಾತೆಯ ಅನುಗ್ರಹ ಹಾಗೂ ಆಶೀರ್ವಾದಿಂದ ಮಾತ್ರ ಇದೆಲ್ಲವೂ ಸಾಧ್ಯ, ಶಿವಾಜಿ ಮಹಾರಾಜರ ಕಾಲದಿಂದಲೂ ನಡೆದುಕೊಂಡು ಬಂದಿರುವಂತಹ ವಾಡಿಕೆ, ಪದ್ಧತಿ. ಈ ದೇಶದ ಇತಿಹಾಸವನ್ನು ಮುಂದಿನ ಯುವ ಪೀಳಿಗೆಗೆ ಪರಿಚಯಿಸುವ ಇಂತಹ ಸತ್ಕಾರ್ಯಗಳನ್ನು ಮಾಡುತ್ತಿರುವ ಈ ಸಮುದಾಯದ ಬಂದುಗಳಿಗೆ ಹಾಗೂ ಈ ಬೃಹತ್ ದೇವಾಲಯ ನಿರ್ಮಾಣಕ್ಕೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ವಿಶೇಷವಾಗಿ ಭಾರತ ದೇಶದಲ್ಲಿ ಪ್ರಧಾನಮಂತ್ರಿನರೇಂದ್ರಮೋದಿಯವರ ದೂರದೃಷ್ಟಿ ಚಿಂತನೆ ಭವಿಷ್ಯ ಭಾರತವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಸತ್ಸಂಪ್ರದಾಯಗಳನ್ನು ಮುಂದುವರೆಸುವಂತಹ ಬಹುದೊಡ್ಡ ಯಾತ್ರ ಸ್ಥಳವಾಗುವುದರಲ್ಲಿ ಅನುಮಾನವೇ ಇಲ್ಲಾ. ಇಚ್ಛಾಶಕ್ತಿ ಇದ್ದರೆ ಮಾತ್ರ ಇಂತಹ ಬಹುದೊಡ್ಡ ದೇವತಾ ಕಾರ್ಯ ಜರುಗಲು ಸಾಧ್ಯ.

ತುಮಕೂರು ಜಿಲ್ಲೆಯ ಮಾರ್ಗವಾಗಿ ಊರುಕೆರಿಯಿಂದ ತಿಮ್ಮರಾಜನಹಳ್ಳಿ ಯವರೆಗೆ ಸುಮಾರು 24 ಕಿ.ಮೀ. ದೂರದವರೆಗೆ ರೈಲ್ವೆ ಕಾಮಗಾರಿ ಪೂರ್ಣಗೊಂಡಿದ್ದು ಪ್ರಾಯೋಗಿಕವಾಗಿ ರೈಲು ಸಂಚರಿಸಿ ಪರಿಶೀಲನೆ ಕೂಡ ನಡೆದಿದೆ, ಮುಂದುವರೆದ ಭಾಗವಾಗಿ ತಿಮ್ಮರಾಜನಹಳ್ಳಿ ಹಾಗೂ ತಾವರೆಕೆರೆ ಜಂಕ್ಷನ್ ವರೆಗೆ ಕಾಮಗಾರಿ ನಡೆಸಲು ಟೆಂಡರ್ ಸಹ ಹಾಗಿದ್ದೂ ಬಹುಬೇಗ ಕಾಮಗಾರಿ ನಡೆಯಲಿದೆ ಜೊತೆಗೆ ಹಿರಿಯೂರು, ಧರ್ಮಸಾಗರ, ಚಿತ್ರದುರ್ಗ, ದಾವಣೆಗೆರೆ ವರೆಗೆ ಕಾಮಗಾರಿ ಪ್ರಗತಿಯಲ್ಲಿವೆ, ಶ್ರೀಘ್ರವೇ ರೈಲ್ವೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ವಿಧಾನ ಪರಿಷತ್ ಶಾಸಕ ಚಿದಾನಂದ ಎಂ.ಗೌಡ ಮಾತನಾಡಿ ಈಡೀ ರಾಜ್ಯದಲ್ಲೇ ಬೃಹತ್ತಾದ ಶ್ರೀ ಅಂಬಾಭವಾನಿ ದೇವಸ್ಥಾನ ಎಲ್ಲಿಯೂ ಇಲ್ಲಾ ಮಹಾರಾಷ್ಟ್ರ ಹೊರತು ಪಡಿಸಿದರೆ ನಮ್ಮ ಕರ್ನಾಟಕದ ಶಿರಾದಲ್ಲಿ ನಿರ್ಮಾಣವಾಗಿರುವುದು ನಮ್ಮನ್ನು ಸೇರಿ ಸಹಸ್ರಾರು ಭಕ್ತರಲ್ಲಿ ಸಂತಸ ತಂದಿದೆ, ಬಹುದೊಡ್ಡ ಇತಿಹಾಸವುಳ್ಳ ಈ ದೇವಸ್ಥಾನ ಶಿವಾಜಿ ಮಹಾರಾಜರು ಯುದ್ಧ ಮಾಡಿ ಈ ಪ್ರಾಂತ್ಯವನ್ನು ಗೆದ್ದಂತಹ ಸಂದರ್ಭದಲ್ಲಿ ಈ ದೇವಾಲಯ ನಿರ್ಮಾಣವಾಗಿದ್ದು, ಈ ಪುರಾತನ ದೇವಸ್ಥಾನದ ಜಾಗ ಬಹಳ ವರ್ಷಗಳಿಂದ ಅಭಿವೃದ್ಧಿ ಕಾಣದೆ ಹಲವಾರು ತೊಂದರೆ, ಸಮಸ್ಯೆಗಳಿಂದ ಮೂಲೆಗುಂಪಾಗಿತ್ತು, ದಿವಂಗತ ಎಸ್. ಎಂ.ಕೃಷ್ಣಯ್ಯ ನವರ ಅಭಿಲಾಷೆಯಂತೆ ಈ ಭಾಗದ ಸಮಸ್ತ ಭಕ್ತವೃಂದ ಸೇರಿ ಶಿರಾ ತಾಲ್ಲೂಕಿನಲ್ಲಿ ಈಗಾಗಲೇ ನಿರ್ಮಾಣವಾಗಿರುವ ಪ್ರಮುಖ ದೇವಾಲಯಗಳಂತೆ ಇದನ್ನು ಕೂಡ ವ್ಯವಸ್ಥಿತವಾಗಿ ನಿರ್ಮಾಣ ಮಾಡಿ ಲೋಕಾರ್ಪಣೆ ಗೊಳಿಸಿರುವುದು ಸಂತಸದ ವಿಷಯ. ಮುಂದಿನ ದಿನಗಳಲ್ಲಿ ಈ ಸ್ಥಳ ಬಹು ದೊಡ್ಡ ಹಿಂದೂ ಧಾರ್ಮಿಕ ಯಾತ್ರಾ ಸ್ಥಳವಾಗಿ ಪ್ರಖ್ಯಾತಿ ಗೊಳ್ಳಲಿದೆ ಎಂದರು.

ದೆಹಲಿ ವಿಶೇಷ ಪ್ರತಿನಿಧಿ, ಶಾಸಕ ಟಿ.ಬಿ. ಜಯಚಂದ್ರ, ಮಾಜಿ ಶಾಸಕ ಡಾ. ಸಿ. ಎಂ. ರಾಜೇಶ್ ಗೌಡ ತುಮುಲ್ ನಿರ್ದೇಶಕ ಎಸ್. ಆರ್. ಗೌಡ, ಬಿಜೆಪಿ ಮುಖಂಡ ಬಿ.ಕೆ. ಮಂಜುನಾಥ್,ರೂಪೇಶ್ ಕೃಷ್ಣಯ್ಯ,ವಕೀಲರಾದ ಬಸವರಾಜು, ಮಂಜುನಾಥ್, ಟ್ರಸ್ಟಿಗಳಾದ ಆರ್.ಉದಯ್ ಕುಮಾರ್, ಬಿ.ಎಸ್. ವಿಜಯ್ ಕುಮಾರ್, ರೂಪೇಶ್ ಕೃಷ್ಣಯ್ಯ, ಲಾಡರ ಸಂಘದ ಉಪಾಧ್ಯಕ್ಷ ಎಸ್.ಜಿ.ನರಸಿಂಹಮೂರ್ತಿ, ಸಂಘಟನಾ ಕಾರ್ಯದರ್ಶಿ ರಂಗನಾಥ್ ಲಾಡ್, ಖಜಾಂಚಿ ಎನ್.ನರಸಿಂಹಮೂರ್ತಿ ಸೇರಿದಂತೆ ಹಲವರು ಹಾಜರಿದ್ದರು.

# ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಕೀಳರಿಮೆ ತೊರೆದರೆ ಯಶಸ್ಸು ಸಾಧ್ಯ: ಮುರಳೀಧರ ಹಾಲಪ್ಪ




ಮಧುಗಿರಿ : ಸರ್ಕಾರಿ ಶಾಲೆಗಳಲ್ಲಿ ಕಲಿತ ಗ್ರಾಮೀಣ ಭಾಗದ ವಿದ್ಯಾರ್ಥಿಗಳೂ ಸಹ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಕೀಳರಿಮೆ ತೊರೆದಲ್ಲಿ ಯಶಸ್ಸು ಸಾಧ್ಯ ಎಂದು ಕೌಶಲ್ಯಾಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮುರಳೀಧರ ಹಾಲಪ್ಪ ತಿಳಿಸಿದರು.

ಪಟ್ಟಣದ ಮಾಲೀಮರಿಯಪ್ಪ ರಂಗಮಂದಿರದಲ್ಲಿ ಶುಕ್ರವಾರ ಹಾಲಪ್ಪ ಪ್ರತಿಷ್ಟಾನದ ವತಿಯಿಂದ ಹಮ್ಮಿಕೊಂಡಿದ್ದ ಕೌಶಲ್ಯ ಪಥ ಯುವ ಸಬಲೀಕರಣ, ನವೋದಯ, ಸೈನಿಕ್, ಮುರಾರ್ಜಿ, ಕಸ್ತೂರಿಬಾ ಇತರೆ ವಸತಿ ಶಾಲೆಗಳ ಉಚಿತ ಪ್ರವೇಶ ಕುರಿತು

ಪ್ರವೇಶ ಪರೀಕ್ಷೆ ಮಾಹಿತಿ ಹಾಗೂ ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಗ್ರಾಮೀಣ ಭಾಗದ ಮಕ್ಕಳು ಜಿ.ಪಂ, ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಲ್ಲಿನ ಪ್ರವೇಶ ಪರೀಕ್ಷೆಯ ಬಗ್ಗೆ ಬಹಳಷ್ಟು ಗೊಂದಲಗಳಿದ್ದು, ಈ ಗೊಂದಲಗಳನ್ನು ಬಗೆ ಹರಿಸುವ ಉದ್ದೇಶದಿಂದ ನುರಿತ ಅಧಿಕಾರಿಗಳಿಂದ ಮಾಹಿತಿ ನೀಡುವ ಉದ್ದೇಶದಿಂದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮಕ್ಕಳಿಗೆ ಅವಕಾಶಗಳು ಅರಸಿ ಬಂದ ಸಂದರ್ಭದಲ್ಲಿ ಅವರಿಗೆ ಸಂಪೂರ್ಣ ಮಾಹಿತಿ ನೀಡಬೇಕು ಎಂಬುದೇ ಕಾರ್ಯಕ್ರಮದ ಉದ್ದೇಶ ಎಂದರು.

ಇಂದು ಅನೇಕ ಮಹನೀಯರು ಸ್ವಂತ ಬಲದಿಂದ ಯಶಸ್ಸು ಕಂಡಿದ್ದು, ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾರೆ. ನವೋದಯ ಶಾಲೆಯಲ್ಲಿ ವ್ಯಾಸಂಗಮಾಡಿ ನಂತರ ಉತ್ತನ ಶಿಕ್ಷಣ ಗಳಿಸಿ ಸ್ವಂತ ಬಲದಿಂದ ಐಪಿಎಸ್ ಮಾಡಿ ತುಮಕೂರು ಜಿಲ್ಲೆಗೆ ಎಸ್.ಪಿ ಆಗಿ ಬಂದಿರುವ ಅಶೋಕ್ ಸೇರಿದಂತೆ ಬಹಳಷ್ಟು ಉನ್ನತ ಹುದ್ದೆಯಲ್ಲಿರುವವರೆಲ್ಲ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದವರಾಗಿದ್ದು, ವಿದ್ಯಾರ್ಥಿಗಳು ಇಂತಹ ಅಧಿಕಾರಿಗಳನ್ನು ಮಾದರಿಯಾಗಿಟ್ಟುಕೊಂಡು ಯಶಸ್ಸು ಗಳಿಸಬೇಕು ಎಂದು ಕಿವಿಮಾತು ಹೇಳಿದ ಅವರು ಕ್ಷೇತ್ರದಲ್ಲಿ ದಕ್ಷ ಶಾಸಕರಿದ್ದು, ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಏನೆಲ್ಲ ಸವಲತ್ತು ಬೇಕೋ ಅದೆಲ್ಲವನ್ನೂ ಮಾಡಲು ಸಿದ್ದರಿದ್ದಾರೆ. ಸಂಸದರೂ ಸಹ ವಿದ್ಯಾರ್ಥಿಗಳ ಏಳಿಗೆಗೆ ಬಹಳಷ್ಟು ಶ್ರಮಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಡವನಹಳ್ಳಿ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ರಮೇಶ್ ಮಾತನಾಡಿ ರಾಜ್ಯದಲ್ಲಿ 824 ವಸತಿ ಶಾಲೆಗಳಿದ್ದು, ಜಿಲ್ಲೆಯಲ್ಲಿ 58 ವಸತಿ ಶಾಲೆಗಳಿವೆ. ಶಾಸಕ ಕೆ.ಎನ್. ರಾಜಣ್ಣನವರ ಇಚ್ಛಾಶಕ್ತಿಯಿಂದ ತಾಲೂಕಿನಲ್ಲಿ 8 ವಸತಿ ಶಾಲೆಗಳಿವೆ. ಬಡಮಕ್ಕಳಲ್ಲಿ ಪ್ರತಿಭೆಯಿದ್ದು, ಮಕ್ಕಳ ಪ್ರತಿಭೆಯನ್ನು ಹೊರಹೊಮ್ಮಿಸಲು ಸರ್ಕಾರದ ವತಿಯಿಂದ ವಸತಿ ಶಾಲೆಗಳ ಪ್ರಾರಂಭಿಸಲಾಗಿದೆ. ಶಾಲೆಗಳಲ್ಲಿ 5 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು 6 ನೇ ತರಗತಿಗೆ ದಾಖಲಾಗಲು ವಸತಿ ಶಾಲೆಗಳಿಗೆ ಅರ್ಜಿ ಸಲ್ಲಿಸಬಹುದು. ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಶಾಲೆಗಳಲ್ಲಿ ಸೀಟುಗಳು ದೊರೆಯಲಿವೆ. ನೇರವಾಗಿ ಪ್ರವೇಶ ಪಡೆಯುವವರು ಕೆಇಎಯಿಂದ ಬಿಡುಗಡೆ ಮಾಡುವ ಲಿಂಕ್ ಬಳಸಿ ಅರ್ಹರು ಮಾತ್ರ ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಬಹುದು. ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೇ ಟಾಪರ್ ಆಗಿ ಹೊರಹೊಮ್ಮಿದವರು ಸರ್ಕಾರಿ ವಸತಿ ಶಾಲೆಯ ಮಕ್ಕಳಾಗಿರುವುದು ವಿಶೇಷ. ಸರ್ಕಾರಿ ವಸತಿ ಶಾಲೆಗಳಲ್ಲಿ ಶಿಕ್ಷಣದ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ, ಉಚಿತ ಕರಾಟೆ ಸಮವಸ್ತ್ರದ ಜೊತೆಗೆ ಕರಾಟೆ ತರಬೇತಿ, ಲ್ಯಾಬ್, ಗಣಕ ಯಂತ್ರ, ಸುಸಜ್ಜಿತ ಗ್ರಂಥಾಲಯ, ಎಸ್.ಎಸ್.ಎಲ್.ಸಿಯಲ್ಲಿ ರಾಜ್ಯಕ್ಕೆ ಪ್ರಥಮ 10 ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ವಿದೇಶಿ ಪ್ರವಾಸ ಇದರ ಜೊತೆಗೆ ಶೂ, ಟೈ, ಲೇಖನ ಸಾಮಗ್ರಿಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು ಎಂದು ಮಾಹಿತಿ ನೀಡಿದರು.

# ಸರಕಾರಿ ಶಾಲೆಗಳು, ಖಾಸಗಿ ಶಾಲೆಗಳ ಪೈಪೋಟಿ ಎದುರಿಸಿ ಗುಣಮಟ್ಟದ ಶಿಕ್ಷಣ ನೀಡಬಲ್ಲವು



ತುಮಕೂರು: ಸರಕಾರಿ ಶಾಲೆಗಳು, ಖಾಸಗಿ ಶಾಲೆಗಳ ಪೈಪೋಟಿ ಎದುರಿಸಿ, ತಮ್ಮಲ್ಲಿ ಪ್ರವೇಶ ಪಡೆಯುವ ಮಕ್ಕಳ ಭೌತಿಕ ಮತ್ತು ಭೌದ್ಧಿಕ ಬೆಳವಣಿಗೆಗೆ ಪೂರಕವಾಗಿ ಕಾರ್ಯನಿರ್ವಹಿಸಬಲ್ಲವುಎಂಬುದಕ್ಕೆ ಶಿರಾಗೇಟ್‌ನ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸಾಕ್ಷಿಯಾಗಿದೆ ಎಂದು ತುಮಕೂರು ನಗರ ಶಾಸಕರಾದ ಜಿ.ಬಿ.ಜೋತಿಗಣೇಶ್ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಶಿರಾಗೇಟ್‌ನಲ್ಲಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ.ಉತ್ತರ ಬಡಾವಣೆಯಲ್ಲಿ ಹಮ್ಮಿಕೊಂಡಿದ್ದ ಶಾಲಾ ವಾರ್ಷಿಕೋತ್ಸವ, ಶಾಲಾ ಮಕ್ಕಳ ಕಲಿಕಾ ಸಂಭ್ರಮಾಚರಣೆ ಹಾಗೂ ಶಾಲಾ ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತಿದ್ದ ಅವರು,ಇಲ್ಲಿನ ಶಿಕ್ಷಕರು, ಎಸ್.ಡಿ.ಎಂ.ಸಿ. ಸದಸ್ಯರುಗಳು ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಸದಸ್ಯರುಗಳು ಹಗಲಿರುಳು ಮಕ್ಕಳ ಶ್ರಯೋಭಿವೃದ್ದಿಗೆ ಶ್ರಮಿಸುತ್ತಿದ್ದಾರೆ. ಇವೆಲ್ಲರ ಶ್ರಮದ ಫಲವಾಗಿ ಇಂದು ಪ್ರಾಥಮಿಕ ಶಾಲೆ, ಎಲ್.ಕೆ.ಜಿ. ಯಿಂದ 12 ತರಗತಿಯವರಗೆ ಒಂದೇ ಸೂರಿನಡಿ ಕಲಿಯಬಹುದಾದ ಕೆ.ಪಿ.ಎಸ್.ಶಾಲೆಯಾಗಿ ಸದ್ಯದಲ್ಲಿಯೇ ಮಾರ್ಪಾಡಾಗಲಿದೆ. ಮಕ್ಕಳ ಸ್ನೇಹಿ ಶೈಕ್ಷಣಿಕ ವಾತಾವರಣ ಇರುವ ಈ ಶಾಲೆ, ಮುಂಬರುವ ದಿನಗಳಲ್ಲಿ ನಗರದಲ್ಲಿರುವ ಸರಕಾರಿ ಶಾಲೆಗಳಲ್ಲಿಯೇ ಪ್ರಖ್ಯಾತಿ ಪಡೆದ ಶಾಲೆಯಾಗಲಿದೆ ಎಂಬ ವಿಶ್ವಾಸವನ್ನು ಶಾಸಕರು ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಲಾ ಶಿಕ್ಷಣ ಇಲಾಖೆಯ ತುಮಕೂರು ದಕ್ಷಿಣ ಜಿಲ್ಲಾಉಪನಿರ್ದೇಶಕರಾದ ಕೆ.ಜಿ.ರಘುಚಂದ್ರ ಅವರು ಮಾತನಾಡಿ, ತುಮಕೂರಿನ ಉತ್ತರ ಬಡಾವಣೆ ಶಾಲೆ ಮುಂದಿನ ಐದಾರು ತಿಂಗಳಲ್ಲಿ, ಭವ್ಯ ಮತ್ತು ಸುಸಜ್ಜಿತ ಬೃಹತ್ ಕಟ್ಟಡವನ್ನು ತನ್ನದಾಗಿಸಿ ಕೊಂಡು, ನಗರದ ಪ್ರತಿಷ್ಠಿತ ಶಾಲೆಗಳ ಸಾಲಿನಲ್ಲಿ ನಿಲ್ಲಲಿದೆ. ಇಲ್ಲಿ ಕಲಿಯುತ್ತಿರುವ ಮಕ್ಕಳು ಮತ್ತು ಅವರ ಪೋಷಕರು ತಮ್ಮ ಸಹೋದರ, ಸಹೋದರಿಯರ ಮಕ್ಕಳನ್ನು ಈ ಶಾಲೆಗೆ ಸೇರಿಸಿ, ಅವರ ಭವಿಷ್ಯವನ್ನು ಉಜ್ವಲಗೊಳಿಸುವ ಕೆಲಸ ಮಾಡಬೇಕು. ಹಾಗೆಯೇ ಮಕ್ಕಳು ಸಹ ಈ ದಿನವನ್ನು ಭವಿಷ್ಯದಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳುವ ದಿನವಾಗಲಿ ಎಂದು ಶುಭ ಹಾರೈಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಶಾಲೆಯ ಪದವಿಧರ ಮುಖ್ಯ ಶಿಕ್ಷಕ ಡಿ.ಎಸ್.ಶಿವಸ್ವಾಮಿ ,ಶಾಲೆಯ ಅಭಿವೃದ್ಧಿಗಾಗಿ 2018 ರಲ್ಲಿ ಎಸ್.ಡಿ.ಎಂ.ಸಿ ಸಮಿತಿ ರಚಿಸಿ,ಅವರ ಮತ್ತು ಹಳೆಯ ವಿದ್ಯಾರ್ಥಿಗಳ ಸಹಕಾರದಿಂದ ಶಾಲೆ ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಹೊಂದುತ್ತಾ ಬಂದಿದೆ. ಇಂದು 280 ಬಾಲಕ, 285 ಬಾಲಕಿಯರು ಸೇರಿಒಟ್ಟು 565 ಮಕ್ಕಳು ಕಲಿಯುತಿದ್ದು, ಅಜಾಕ್ಸ್ ಸಂಸ್ಥೆ ಹೊಸದಾಗಿ 16 ಕೋಟಿರೂ ವೆಚ್ಚದಲ್ಲಿ ಬೃಹತ್ ಕಟ್ಟಡವನ್ನು ನಿರ್ಮಿಸುತ್ತಿದ್ದು, 2026–27ನೇ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಉದ್ಘಾಟನೆಯಾಗುವ ನಿರೀಕ್ಷೆಯಿದೆ. ಕಳೆದ ವರ್ಷದಿಂದ ಶಾಲೆಯಲ್ಲಿ ಎಲ್.ಕೆ.ಜಿ., ಯುಕೆಜಿ ಆರಂಭವಾಗಿದೆ. ಅಲ್ಲದೆ ಹೈಸ್ಕೂಲ್‌ನಲ್ಲಿ ಆಂಗ್ಲಮಾಧ್ಯಮವೂ ಆರಂಭವಾಗಿ ಸುಸೂತ್ರವಾಗಿ ನಡೆಯುತ್ತಿದೆ. ಸರಕಾರ ನಮಗೆ ಹೆಚ್ಚಿನ ಸವಲತ್ತು ನೀಡಿದ್ದು, ಶಿಕ್ಷಕರ ಮೇಲೆ ಹೆಚ್ಚಿನಜವಾಬ್ದಾರಿ ಇದೆ.ಅದಕ್ಕಾಗಿ ಈ ಫೆಬ್ರವರಿಯಿಂದ ಒಂದು ಯೋಜನೆ ಸಿದ್ದಪಡಿಸಿ, ಹೆಚ್ಚಿನ ಮಕ್ಕಳು ಶಾಲೆಗೆ ಸೇರುವಂತೆ ಮಾಡುವ ಮೂಲಕ ನಮ್ಮ ಮೇಲಿನ ನಂಬಿಕೆಯನ್ನು ಉಳಿಸಿ ಕೊಳ್ಳೋಣ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಸ್.ಡಿ.ಎಂ.ಸಿಅಧ್ಯಕ್ಷರಾದ ಓಬಳಯ್ಯ ಮಾತನಾಡಿ, ಶಿರಾಗೇಟ್‌ನಲ್ಲಿರುವ ಈ ಶಾಲೆ ನಗರದ ಹೃದಯ ಭಾಗದಲ್ಲಿದ್ದು, ಮುಂದಿನ ದಿನಗಳಲ್ಲಿ ಈ ಶಾಲೆಯ ಪ್ರವೇಶಕ್ಕೆ ಬಹಳ ಬೇಡಿಕೆ ಬರಲಿದೆ. ಭವಿಷ್ಯದಲ್ಲಿ ದೊಡ್ಡ ಶಿಕ್ಷಣ ಸಂಸ್ಥೆಯಾಗಿ ಹೆಸರು ಮಾಡಲಿದೆ ಎಂದರು.

# ತೂಕ ಮತ್ತು ಅಳತೆ ಕಾನೂನಿಗೆ ತಿದ್ದುಪಡಿ: ಗ್ರಾಹಕ ಪರಿಷತ್ ವಿರೋಧ



ತುಮಕೂರು: ಭಾರತ ಸರ್ಕಾರವು ತನ್ನ ಇತ್ತೀಚಿನ ಅಧಿಸೂಚನೆಯ ಮೂಲಕ ಗ್ರಾಹಕ ವ್ಯವಹಾರಗಳ ಅಡಿಯಲ್ಲಿ ಬರುವ ಕಾನೂನು ಮಾಪನಶಾಸ್ತ್ರ ಇಲಖೆಗೆ ನಿಯಮಗಳ ತಿದ್ದುಪಡಿ ಮಾಡಲು ಹೊರಟಿದೆ. ಲೈಸೆನ್ಸ್ ನವೀಕರಿಸುವ ಸಮಯ ಮಿತಿಯನ್ನು ವಿಸ್ತಾರಗೊಳಿಸುತ್ತಿದ್ದು, ಇದು ಗ್ರಾಹಕರ ಹಿತಾಸಕ್ತಿಗೆ ವಿರುದ್ಧವಾಗಿದೆ. ಗ್ರಾಹಕರ ಹಕ್ಕುಗಳನ್ನು ಮೊಟಕು ಮಾಡಲಿದೆ ಎಂದು ಗ್ರಾಹಕ ಜಾಗೃತಿ ಹಕ್ಕು ಮತ್ತು ಶಿಕ್ಷಣ ಪರಿಷತ್ ಅಸಮಾದಾನ ವ್ಯಕ್ತಪಡಿಸಿದೆ.

ಈ ಸಂಬಂಧ ಪತ್ರಿಕಾ ಗೋಷ್ಠಿಯಲ್ಲಿ ಮಾಹಿತಿ ನೀಡಿ ಮಾತನಾಡಿದ ಪರಿಷತ್ ಕಾರ್ಯದರ್ಶಿ ಹಾಗೂ ವಕೀಲರಾದ ಟಿ.ಎಸ್.ನಿರಂಜನ್ ಅವರು ಪೆಟ್ರೋಲ್, ಡೀಸೆಲ್ ಪಂಪುಗಳು ಸೇರಿದಂತೆ ತೂಕ ಮತ್ತು ಅಳತೆ ಯಂತ್ರಗಳನ್ನು, ವರ್ಷಕ್ಕೊಮ್ಮೆ ತಪಾಸಣೆ ನಡೆಸಿ ಸರ್ಟಿಫೈ ಮಾಡುವ ಅವಕಾಶ ಈವರೆಗೆ ಇದೆ. ಆದರೆ ಈ ಅವಧಿಯನ್ನು ಮೂರು ವರ್ಷಗಳಿಗೆ ವಿಸ್ತರಿಸಲು ಕೇಂದ್ರ ಸರ್ಕಾರ ಮುಂದಾಗಿದ್ದು, ಈಗಾಗಲೇ ನೋಟಿಫಿಕೇಷನ್ ಹೊರಡಿಸಿದೆ. ಈ ನಿಯಮ ಜಾರಿಗೆ ಬಂದರೆ ಗ್ರಾಹಕರ ಮೇಲೆ ಮತ್ತಷ್ಟು ಹೊಡೆತ ಬೀಳುವುದಲ್ಲದೆ, ತೂಕ ಮತ್ತು ಅಳತೆಯಲ್ಲಿನ ಮೋಸ ಮತ್ತಷ್ಟು ಹೆಚ್ಚಲಿದೆ ಎಂದರು.

ಪೆಟ್ರೋಲ್, ಡೀಸೆಲ್ ಪಂಪುಗಳ ಮುದ್ರೆ ಅವಧಿಯನ್ನು ಒಂದುವರ್ಷದಿಂದ 2 ವರ್ಷಕ್ಕೆ ವಿಸ್ತರಿಸಲಾಗಿದೆ. ಇದನ್ನು ಗಮನಿಸಿದರೆ ಕೇಂದ್ರ ಸರ್ಕಾರವು ಕಾನೂನು ಮಾಪನ ಶಾಸ್ತ್ರ ಇಲಾಖೆಯನ್ನು ಖಾಸಗೀಕರಣಗೊಳಿಸುವ ಮೂಲಕ ಇಲಾಖೆಯನ್ನು ದುರ್ಬಲಗೊಳಿಸುವ ಪ್ರಯತ್ನ ಮಾಡುತ್ತಿದೆ. ಮುದ್ರೆ ಮಾಡುವ ಅಧಿಕಾರವನ್ನು ಸರ್ಕಾರದಿಂದ ಕಸಿದು ಖಾಸಗೀಯವರ ಕೈಗೆ ಒಪ್ಪಿಸುವ ಪ್ರಯತ್ನದ ಅನುಮಾನಗಳು ಮೂಡುತ್ತಿದ್ದು, ಕೇಂದ್ರ ಸರ್ಕಾರ ಈ ಕೂಡಲೆ ಈ ಮಸೂದೆಯನ್ನು ಸಾರ್ವಜನಿಕ ಚರ್ಚೆಗೆ ಬಿಡುವಂತೆ ಆಗ್ರಹಿಸಿದರು.

ಬಹಳಷ್ಟು ಕಡೆ ಪೆಟ್ರೋಲ್, ಡೀಸೆಲ್ ಪಂಪುಗಳಲ್ಲಿ ಮೋಸವಾಗುತ್ತಿರುವ ಆಪಾದನೆಗಳಿವೆ. ಕಾನೂನು ಮಾಪನ ಶಾಸ್ತ್ರ ಇಲಾಖೆಯು ಈ ಬಗ್ಗೆ ಹೆಚ್ಚು ತಪಾಸಣೆ ನಡೆಸಿ ಅನ್ಯಾಯಗಳನ್ನು ಪತ್ತೆ ಹಚ್ಚಬೇಕು. ಆದರೆ ಸಮಯದ ಅವಕಾಶವನ್ನು ಎರಡು ವರ್ಷಗಳಿಗೆ ವಿಸ್ತರಿಸುವುದರಿಂದ ಇಲಾಖೆಯ ಕಾರ್ಯವೈಖರಿಯನ್ನೇ ಕುಂಠಿತಗೊಳಿಸಿದಂತಾಗುತ್ತದೆ. ಮೋಸದ ಸಂಭವ ಮತ್ತಷ್ಟು ಹೆಚ್ಚಾಗುತ್ತದೆ ಎಂದು ಅಸಮಾದಾನ ವ್ಯಕ್ತಪಡಿಸಿದರು.

ರೈತರು ತೂಕ ಮಾಡಿಸುವ ತೂಕದ ಯಂತ್ರಗಳು, ಒಡವೆ, ಆಭರಣ ಅಂಗಡಿಗಳಲ್ಲಿ, ದಿನಸಿ ಅಂಗಡಿಗಳಲ್ಲಿ, ವ್ಯಾಪಾರ ಸ್ಥಳಗಳಲ್ಲಿ ಬಳಸುವ ತೂಕದ ಯಂತ್ರಗಳನ್ನು ಪರಿಶೀಲಿಸಿ ಮುದ್ರೆ ಮಾಡುವ ಅಧಿಕಾರ ಖಾಸಗೀಯವರಿಗೆ ವಹಿಸಿದರೆ ಮತ್ತಷ್ಟು ಅಪಾಯವಿದೆ. ಇದರಿಂದ ರೈತರು ಮಾರಾಟ ಮಾಡುವ ಹಾಗೂ ಗ್ರಾಹಕರು ಖರೀದಿಸುವ ವಸ್ತುಗಳಲ್ಲಿ ಮೋಸದ ಸಾಧ್ಯತೆ ಹೆಚ್ಚುತ್ತದೆ. ನಿಯಮ ಉಲ್ಲಂಘಿಸುವವರಿಗೆ ಕಠಿಣ ಕ್ರಮ ವಹಿಸುವ ಬದಲು ಸುಧಾರಣಾ ನೋಟಿಸ್ ನೀಡುವ ಮೂಲಕ ಗ್ರಾಹಕರ ಹಕ್ಕುಗಳನ್ನು ವಂಚಿಸಲಾಗುತ್ತಿದೆ ಎಂದರು.

ಖಾಸಗೀಕರಣದಿಂದ ಸರ್ಕಾರಕ್ಕೆ ವಾರ್ಷಿಕ 100 ಕೋಟಿ ರೂ.ಗಳಷ್ಟು ರಾಜಸ್ವ ನಷ್ಟವಾಗುವುದಲ್ಲದೆ, ಗ್ರಾಹಕರ ರಕ್ಷಣೆಯಲ್ಲಿ ವಿಫಲವಾಗುತ್ತದೆ. ನೂರಾರು ಕೋಟಿ ಜನಸಂಖ್ಯೆ ಇರುವ ಭಾರತದಲ್ಲಿ ತೂಕ ಮತ್ತು ಅಳೆಗೆಯಲ್ಲಿ ಸಣ್ಣ ಪ್ರಮಾಣದ ಮೋಸವಾದರು ಗ್ರಾಹಕರಿಗೆ ಸಾವಿರಾರು ಕೋಟಿ ರೂ.ಗಳಷ್ಟು ನಷ್ಟ ಉಂಟಾಗುತ್ತದೆ. ಈ ಎಲ್ಲ ಕಾರಣಗಳಿಂದಾಗಿ ತೂಕದ ಯಂತ್ರಗಳ ಪರಿಶೀಲನೆ ಮತ್ತು ಮುದ್ರೆ ಅವಧಿಯನ್ನು ವಿಸ್ತರಿಸದೆ ಒಂದು ವರ್ಷದ ಅವಧಿಗೆ ಸೀಮಿತಗೊಳಿಸಬೇಕು ಎಂದು ಅವರು ಆಗ್ರಹಿಸಿದರು.

ಗ್ರಾಹಕ ಪರಿಷತ್ ವತಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಿಂದ ಹೋರಾಟ ರೂಪಿಸಲಾಗುವುದು. ಪ್ರಹ್ಲಾದ ಜೋಷಿ ಅವರಿಗೂ ಮನವಿ ಸಲ್ಲಿಸಲಾಗುವುದು ಎಂದರು.

ಪತ್ರಿಕಾ ಗೋಷ್ಠಿಯಲ್ಲಿ ಎ.ವಿ.ವಿಠ್ಠಲರಾವ್, ಅತ್ತಿ ರೇಣುಕಾನಂದ,ಅಯಾಜ್ ಅಹಮದ್ ಉಪಸ್ಥಿತರಿದ್ದರು.

## ಸಿಪಿ ನ್ಯೂಸ್ ಸುದ್ದಿ

### ಸಿಇಟಿ/ನೀಟ್ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ – ಶಾಸಕ ಸಿ.ಬಿ.ಸುರೇಶ್‌ಬಾಬು



ಚಿಕ್ಕನಾಯಕನಹಳ್ಳಿ24;–ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗಾಗಿ ಅವರ ಭವಿಷ್ಯಕ್ಕಾಗಿ ಕಳೆದ ಹಲವಾರು ವರ್ಷಗಳಿಂದ ಎಸ್.ಬಿ.ಚಾರಿಟಬಲ್ ಟ್ರಸ್ಟ್ ವತಿಯಿಂದ ನೀಡುತ್ತಿರುವ ಜ್ಞಾನಕಲ್ಪ ಉಚಿತ ಸಿ.ಇ.ಟಿ / ನೀಟ್ ತರಬೇತಿಯಲ್ಲಿ ಕಳೆದವರ್ಷ ತರಬೇತಿ ಪಡೆದು ಸರ್ಕಾರಿ ಸೀಟು ಪಡೆದು ಉನ್ನತ ವ್ಯಾಸಂಗಕ್ಕೆ ಹೋಗಿರುವಂತಹ ವಿದ್ಯಾರ್ಥಿಗಳನ್ನು ಅಭಿನಂದಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದ್ದಾರೆ.

ಅಭಿನಂದನಾ ಸಮಾರಂಭ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು ಕಳೆದ 2024–25 ನೇ ಸಾಲಿನಲ್ಲಿ ನಮ್ಮ ತಾಲ್ಲೂಕಿನಲ್ಲಿರುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಸೇರಿದಂತೆ ರಾಜ್ಯದ ಗುಲ್ಬರ್ಗ,ಶಿವಮೊಗ್ಗ, ಚಿತ್ರದುರ್ಗ, ಹಾಸನ ಹಾಗೂ ಬೇರೆ ತಾಲ್ಲೂಕಿನ ಒಟ್ಟು 383 ವಿದ್ಯಾರ್ಥಿಗಳಿಗೆ 28ದಿನಗಳ ಕಾಲ ನಿರಂತರವಾಗಿ ಸಿಇಟಿ / ನೀಟ್ ತರಬೇತಿಯನ್ನು ನುರಿತ ಸಂಪನ್ಮೂಲ ವ್ಯಕ್ತಿಗಳಾದ ಪಲ್ಲವಿ ಜೆ ಇವರ ತಂಡದಿಂದ ಉಪನ್ಯಾಸ ನೀಡಿಸಿದ್ದು ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಪುಸ್ತಕಗಳು ಹಾಗೂ ಪರಿಕರಗಳನ್ನು ನೀಡಿದ್ದು ಇದರೊಂದಿಗೆ ಅವರಿಗೆ ಕೃಷಿಗೆ ಸಂಬಂದಿಸಿದಂತೆ ಪ್ರಾಯೋಗಿಕವಾಗಿಯೂ ತರಬೇತಿಯನ್ನು ನೀಡಲಾಗಿತ್ತು ಈ ತರಬೇತಿಯಲ್ಲಿ ತರಬೇತಿ ಪಡೆದು 93ಜನ ವಿದ್ಯಾರ್ಥಿಗಳು ಸರ್ಕಾರಿ ಸೀಟುಗಳನ್ನು ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ ಇದರಲ್ಲಿ 49ಜನ ವಿದ್ಯಾರ್ಥಿಗಳು ಇಂಜಿನಿಯರಿಂಗ್, 31ಜನ ಬಿಎಸ್‌ಸಿ ನರ್ಸಿಂಗ್, 07ಜನ ಭಿ.ಫಾರ್ಮಸಿಗೆ, 03ಜನ ಬಿಎಸ್‌ಸಿ ಅಗ್ರಿಕಲ್ಚರಲ್, 01 ಬಿಎಸ್‌ಸಿ ಎ.ಎಸ್.ಎಸ್‌ಗೆ, 2ಜನ ಬಿಎಸ್‌ಸಿ ಅನಸ್ತೇಷಿಯಾಗಳಿಗೆ ಸರ್ಕಾರಿ ಸೀಟನ್ನು ಪಡೆದು ಆಯ್ಕೆಯಾಗಿದ್ದಾರೆ.

ಈ ವಿದ್ಯಾರ್ಥಿಗಳಿಗೆ ಮುಂದಿನ ಅವರ ವಿದ್ಯಾಬ್ಯಾಸಕ್ಕೆ ಏನು ಅವಶ್ಯಕತೆ ಇದೆ ಎಂದು ತಿಳಿದು ಅವರಿಗೆ ಅದಕ್ಕೆ ಪೂರಕವಾಗಿ ಅದನ್ನು ನೀಡುವ ಮೂಲಕ ಅವರನ್ನು ಅಭಿನಂದಿಸುವ ಕಾರ್ಯಕ್ರಮವನ್ನು ಇದೇ ತಿಂಗಳ ದಿನಾಂಕ 26/01/2026ರ ಸೋಮವಾರ ಮದ್ಯಾಹ್ನ 2ಗಂಟೆಗೆ ಪಟ್ಟಣದ ತೀನಂಶ್ರೀ ಭವನದಲ್ಲಿ ಏರ್ಪಡಿಸಲಾಗಿದ್ದು ಈ ಕಾರ್ಯಕ್ರಮವನ್ನು ತುಮಕೂರು ವಿವಿಯ ಪ್ರಭಾರ ಕುಲಸಚಿವರು, ಉಪವಿಭಾಗಾಧಿಕಾರಿಯಾದ ನಾಹಿದಾ ಝಮ್‌ಝಮ್ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಶಾಸಕರು ಹಾಗೂ ಎಸ್‌ಬಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸಿ.ಬಿ.ಸುರೇಶ್‌ಬಾಬು ವಹಿಸಲಿದ್ದು ಆಶಯ ನುಡಿಗಳನ್ನು ಸಿಇಟಿ ತರಬೇತಿಯ ಶಿಬಿರದ ಸಮತಿಯ ಅದ್ಯಕ್ಷ ಸಾ.ಚಿ.ನಾಗೇಶ್ ಮಾತನಾಡಲಿದ್ದು ಮುಖ್ಯ ಅತಿಥಿಗಳಾಗಿ ತಹಸೀಲ್ದಾರ್ ಮಮತ, ಇಒ ದೊಡ್ಡಸಿದ್ದಯ್ಯ, ಬಿಇಒ ಕಾಂತರಾಜು, ಪಿಎಲ್‌ಡಿ ಬ್ಯಾಂಕ್‌ನಿರ್ದೇಶಕ ರಾಮಚಂದ್ರಯ್ಯ ಸೇರಿದಂತೆ ಇತರರು ಭಾಗವಹಿಸುವರು ಎಂದು ತಿಳಿಸಿದರು.

# ಶ್ರೀ ಶೃಂಗೇರಿ ಶಾರದಾ ಪೀಠದಲ್ಲಿ ದೀಕ್ಷಾ ಮಹೋತ್ಸವ ಕೆ.ಜಿ. ದೇವಪಟ್ಟಣದ ಶ್ರೀ ವಿದ್ಯಾನಂದ ಸ್ವಾಮಿಗೆ ನಾಮಾಂಕಿತ

ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠದಲ್ಲಿ ವಸಂತ ಪಂಚಮಿಯ ಪೂರ್ವಭಾವಿಯಾಗಿ ನಡೆದ ವಿಶೇಷ ಧಾರ್ಮಿಕ ಸಮಾರಂಭದಲ್ಲಿ, ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಕೆ.ಜಿ. ದೇವಪಟ್ಟಣದ ಶ್ರೀ ವಿದ್ಯಾ ಚೌಡೇಶ್ವರಿ ಅಮ್ಮನವರ ಪುಣ್ಯಕ್ಷೇತ್ರದ ಶ್ರೀ ಬಾಲಮಂಜುನಾಥ ಸ್ವಾಮೀಜಿಯವರು ಶೃಂಗೇರಿ ಜಗದ್ಗುರುಗಳಿಂದ ದೀಕ್ಷೆಯನ್ನು ಸ್ವೀಕರಿಸಿದರು.

ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರುಗಳಾದ ಶ್ರೀ ಶ್ರೀ ವಿಧುಶೇಖರ ಭಾರತಿ ಸನ್ನಿಧಾನಂಳವರು ಶ್ರೀ ಬಾಲಮಂಜುನಾಥ ಸ್ವಾಮೀಜಿಯವರಿಗೆ ದೀಕ್ಷೆಯನ್ನು ಅನುಗ್ರಹಿಸಿ, ಅವರಿಗೆ "ಶ್ರೀ ವಿದ್ಯಾನಂದ ಸ್ವಾಮಿಗಳು" ಎಂದು ನೂತನವಾಗಿ ನಾಮಂಕಿತ ಅನುಗ್ರಹಿಸಿದರು.

### ಸ್ಫಟಿಕ ಮಾಲೆ ಪ್ರದಾನ ಮತ್ತು ಅನುಗ್ರಹ ಸಂದೇಶ:



ಈ ಪುಣ್ಯ ಸಂದರ್ಭದಲ್ಲಿ ವಿಶೇಷ ಘಳಿಗೆಯೊಂದು



ನೆರವೇರಿತು. ಶ್ರೀ ಜಗದ್ಗುರು ವಿಧುಶೇಖರ ಭಾರತಿ ಸನ್ನಿಧಾನಂಗಳವರು ಶ್ರೀಚಂದ್ರಮೌಳೇಶ್ವರ ಶಾರದ ಅಮ್ಮನವರ ಪ್ರಸಾದವಾಗಿ ತಾವು ಅನುಷ್ಠಾನ ಮಾಡಿದ ಗೌರಿಶಂಕರ ರುದ್ರಾಕ್ಷಿ ಮಾಲೆ ತಮ್ಮ ಗುರುಗಳ ಕೊರಳಲಿ ಇದ್ದ 'ಸ್ಫಟಿಕ ಮಾಲೆಯನ್ನ ಪ್ರಸಾದ ರೂಪದಲ್ಲಿ ಶ್ರೀ ವಿದ್ಯಾನಂದ ಸ್ವಾಮಿಗಳವರಿಗೆ ನೀಡಿ ಅನುಗ್ರಹಿಸಿ ಶ್ರೀ ಗಳಿಗೆ ಧರ್ಮ ಮಾರ್ಗ, ತಪಸ್ಸು ಮತ್ತು ಲೋಕ ಕಲ್ಯಾಣದ ಕುರಿತು ಜಗದ್ಗುರುಗಳು ವಿಶೇಷ ಅನುಗ್ರಹಿಸಿದರು. ಶೃಂಗೇರಿಯ ಪವಿತ್ರ ಸನ್ನಿಧಿಯಲ್ಲಿ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಈ ದೀಕ್ಷಾ ಕಾರ್ಯಕ್ರಮ ಮತ್ತು ನಾಮಕರಣ ಮಹೋತ್ಸವವು ಕೆ.ಜಿ. ದೇವಪಟ್ಟಣದ ಶ್ರೀ ವಿದ್ಯಾ ಚೌಡೇಶ್ವರಿ ಕ್ಷೇತ್ರದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಕ್ಷಣವಾಗಿದೆ ಎಂದು ಭಕ್ತವೃಂದ ಹರ್ಷ ವ್ಯಕ್ತಪಡಿಸಿದೆ.

### ಜ.26ರಂದು ಪುಷ್ಪ ನಮನ ಕಾರ್ಯಕ್ರಮ

ತುಮಕೂರು: ಜಿಲ್ಲಾಡಳಿತದ ವತಿಯಿಂದ ಜನವರಿ 26ರಂದು ಬೆಳಿಗ್ಗೆ 7.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ "ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ"ನವರು ಹುತಾತ್ಮರಾದ ದಿನದ ಸ್ಮರಣಾರ್ಥವಾಗಿ ಸಂಗೊಳ್ಳಿ ರಾಯಣ್ಣ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸರ್ಕಾರಿ ಅಧಿಕಾರಿಗಳು, ನೌಕರರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಈಶ್ವರ್ ಕು. ಮಿರ್ಜಿ ಮನವಿ ಮಾಡಿದ್ದಾರೆ.

### ಜ.28, 29ರಂದು ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ

ತುಮಕೂರು: ಜಿಲ್ಲಾಡಳಿತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ಜನವರಿ 28 ಮತ್ತು 29ರಂದು ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ "ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ"ಗಳ ಸಮಾರಂಭವನ್ನು ಏರ್ಪಡಿಸಲಾಗಿದೆ.

ಸಮಾರಂಭದಲ್ಲಿ ಜಿಲ್ಲೆಯ ವಿವಿಧ ಚುನಾಯಿತ ಪ್ರತಿನಿಧಿಗಳು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರು, ಸಂಘದ ಪದಾಧಿಕಾರಿಗಳು ಹಾಗೂ ನಿರ್ದೇಶಕರು ಭಾಗವಹಿಸಲಿದ್ದಾರೆ.

ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು ತಮ್ಮ ಕೆಜಿಐಡಿ ಸಂಖ್ಯೆ ಮತ್ತು ಗುರುತಿನ ಚೀಟಿಯನ್ನು ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ಜಿಲ್ಲೆಯ ಎಲ್ಲಾ ಕ್ರೀಡಾಪಟುಗಳು, ಕ್ರೀಡಾಭಿಮಾನಿಗಳು ಹಾಗೂ ಸಾಂಸ್ಕೃತಿಕ ಸ್ಪರ್ಧಿಗಳು ಕ್ರೀಡಾಕೂಟದಲ್ಲಿ ಭಾಗವಹಿಸಬೇಕಾಗಿ ಪ್ರಕಟಣೆ ತಿಳಿಸಿದೆ.

### ಪಥಸಂಚಲನಕ್ಕೆ ಪೌರಕಾರ್ಮಿಕರ ತಾಲೀಮು.

ಪುರ ಸ್ವಚ್ಛತೆಯಲ್ಲಿ ತಮ್ಮನ್ನು ತಾವು ಅರ್ಪಿಸಿಕೊಳ್ಳುತ್ತಿದ್ದ ಪೌರಕಾರ್ಮಿಕರು ಈಗ ಜನವರಿ 26 ರಂದು ಗಣರಾಜ್ಯೋತ್ಸವದಲ್ಲಿ ತಾಲ್ಲೂಕು ಕ್ರೀಡಾಂಗಣದಲ್ಲಿ ಪಥ ಸಂಚಲನೆ ಮಾಡಿ ಧ್ವಜ ವಂದನೆ ಸಲ್ಲಿಸಲಿದ್ದಾರೆ.

ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ತಮ್ಮ ದೈನಂದಿನ ಸ್ವಚ್ಛತೆ ನೈರ್ಮಲ್ಯ ಕಾಯಕ ಮಾಡಿ ತಾಲೂಕು ಕ್ರೀಡಾಂಗಣದಲ್ಲಿ ನುರಿತ ದೈಹಿಕ ಶಿಕ್ಷಕರಿಂದ ಕೇವಲ ಬಿಡುವಿನ ವೇಳೆಯಲ್ಲಿ ಶಿಸ್ತು ಬದ್ಧ ಲೆಫ್ಟ್ ರೈಟ್ ಹೆಜ್ಜೆ ಹಾಕುತ್ತಾ ಪುರಸಭೆ ಧ್ವಜ ಹಿಡಿದು ಸಾಲಾಗಿ ರಾಷ್ಟ್ರಧ್ವಜಕ್ಕೆ, ಪುರ ಪ್ರಮುಖರಿಗೆ ಧ್ವಜ ವಂದನೆ ಸಲ್ಲಿಸಲಿದ್ದಾರೆ.

ಸಾಮಾನ್ಯವಾಗಿ ಸೇನಾ ಪಡೆ ಪೊಲೀಸ್ ಗೃಹರಕ್ಷಕ ಎನ್ ಸಿ ಸಿ,ಸ್ಕೌಟ್ಸ್ ಅಂಡ್ ಗೈಡ್ಸ್, ಶಾಲಾ ವಿದ್ಯಾರ್ಥಿಗಳು ನಡೆಸುವ ಪಥ ಸಂಚಲನ ದಲ್ಲಿ ಶ್ರಮ ಜೀವಿಗಳಾದ ಪೌರಕಾರ್ಮಿಕರು ಹೆಜ್ಜೆ ಹಾಕಲು ತಯಾರಿ ಆಗಿರೋದು ವಿಶೇಷ.

ತಾಲೂಕು ದಂಡಾಧಿಕಾರಿ. ಮಮತಾ. ಎಂ.

ಪೌರಕಾರ್ಮಿಕರು ಪಟ್ಟಣವನ್ನು ಸ್ವಚ್ಛವಾಗಿಟ್ಟು ಅಂದವಾಗಿ ಕಾಣುವಂತೆ ಮಾಡುವಲ್ಲಿ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತಿದ್ದಾರೆ ಅಂತಹ ಕಾಯಕ ಯೋಗಿಗಳಿಗೆ ಪದ ಸಂಚಲನದಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡುವ ಮೂಲಕ ಸಾರ್ವಜನಿಕವಾಗಿ ಗೌರವಿಸಲು ಮತ್ತು ಇವರಿಗೆ ಮುಖ್ಯವಾಗಿ ಸ್ಥಾನ ಕಲ್ಪಿಸಲು ಪ್ರಪ್ರಥಮವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಸಿ ಬಿ ಸುರೇಶ್ ಬಾಬು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.